ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 150 RNI Number : KNKAN/25/A2770 08-06-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :150 ರಾಯಚೂರು 08-06-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ರಾಜ್ಯ ಬಿಜೆಪಿಯಲ್ಲಿ ಮತ್ತೆ ನಾಯಕತ್ವ ಚರ್ಚೆ, ಕುತೂಹಲ ಮೂಡಿಸಿದ ಹೈಕಮಾಂಡ್ ನಡೆ

ಬೆಂಗಳೂರು,ಜೂ.7-

ಕರ್ನಾಟಕ ಬಿಜೆಪಿಯ ರಾಜ್ಯಾಧ್ಯಕ್ಷರ ಬದಲಾವಣೆ ಅಥವಾ ಹೊಸ ಆಯ್ಕೆಯ ಕುರಿತಾದ ಚರ್ಚೆಗಳು ಸಾಕಷ್ಟು ಕುತೂಹಲ ಮತ್ತು ಅಸಮಾಧಾನ ಎರಡನ್ನೂ ಹುಟ್ಟುಹಾಕಿವೆ. ಪ್ರಸ್ತುತ ಬಿ.ವೈ. ವಿಜಯೇಂದ್ರ ಅವರು ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮುಂದುವರಿದ್ದಾರೆ. ಆದಾಗ್ಯೂ, ಪಕ್ಷದೊಳಗಿನ ಆಂತರಿಕ ಬೆಳವಣಿಗೆಗಳು ಮತ್ತು ರಾಜ್ಯ ರಾಜಕಾರಣದಲ್ಲಿ ಉಂಟಾಗಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ, ನಾಯಕತ್ವದ ಕುರಿತಾದ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದಿವೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬೆಂಬಲ ಮತ್ತು ಮಾರ್ಗದರ್ಶನ ವಿಜಯೇಂದ್ರ ಅವರ ಪಾಲಿಗೆ ರಕ್ಷಾಕವಚವಾಗಿದ್ದರೂ, ದೆಹಲಿಯ ವರಿಷ್ಠರು ಅಂತಿಮವಾಗಿ ಸಾಮಾಜಿಕ ನ್ಯಾಯ ಮತ್ತು 'ಸಂಘಟನಾ ಬಲದ ನಡುವೆ ಸಮತೋಲನ ಕಂಡುಕೊಳ್ಳುವತ್ತ ಗಮನಹರಿಸಿದ್ದಾರೆ.

ಬಿಜೆಪಿ ಹೈಕಮಾಂಡ್ ಮೀನಮೇಷ ಎಣಿಸುತ್ತಿರುವುದು ಕೇವಲ ವಿಳಂಬವಲ್ಲ, ಬದಲಿಗೆ ಅಸ್ತಿತ್ವದ ಹೋರಾಟದ ಭಾಗವಾಗಿರುವ ಒಂದು ಜಾಗರೂಕತೆಯ ಹೆಜ್ಜೆಯಾಗಿದೆ. ಕಾರ್ಯಕರ್ತರ ಅಸಮಾಧಾನವನ್ನು ತಣಿಸಲು ಶೀಘ್ರವೇ ಸ್ಪಷ್ಟತೆಯೊಂದು ಅಗತ್ಯವಾಗಿದೆ ಎಂಬ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ. ಕೇಂದ್ರ ಬಿಜೆಪಿ ನಾಯಕತ್ವವು ಹಲವು ರಾಜ್ಯಗಳಲ್ಲಿ ಆಂತರಿಕ ಸಂಘಟನೆಯನ್ನು ಬಲಪಡಿಸುತ್ತಿದ್ದರೂ, ಕರ್ನಾಟಕದ ವಿಷಯದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುತ್ತಿದೆ. ಇದರ ಕಾರಣಗಳು ಅನೇಕ.

ರಾಜ್ಯದಲ್ಲಿ ಲಿಂಗಾಯತ, ಒಕ್ಕಲಿಗ ಮತ್ತು ಒಬಿಸಿ ಸಮುದಾಯಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಬಿಜೆಪಿಗೆ ದೊಡ್ಡ ಸವಾಲಾಗಿದೆ. ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷವು ಒಂದು ವರ್ಗದ ಪ್ರಾಬಲ್ಯವನ್ನು ಹೊಂದಿದೆ ಎಂಬ ಆರೋಪವಿದ್ದು, ಇದನ್ನು ಸರಿದೂಗಿಸಲು ಬೇರೆ ಸಮುದಾಯದ ಮುಖಂಡರನ್ನು ಪರಿಗಣಿಸಬೇಕೆ ಎಂಬ ಚರ್ಚೆ ದೆಹಲಿ ಮಟ್ಟದಲ್ಲಿ ನಡೆಯುತ್ತಿದೆ.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ (ಒಕ್ಕಲಿಗ ಸಮುದಾಯ) ಮತ್ತು ರಾಜ್ಯಾಧ್ಯಕ್ಷ ವಿಜಯೇಂದ್ರ (ಲಿಂಗಾಯತ ಸಮುದಾಯ) ಅವರ ನಡುವಿನ ಸಮನ್ವಯವು ಪಕ್ಷದ ಕಾರ್ಯತಂತ್ರಕ್ಕೆ ನಿರ್ಣಾಯಕವಾಗಿದೆ. ಕಾಂಗ್ರೆಸ್‌ನಲ್ಲಿ ಡಿ.ಕೆ. ಶಿವಕುಮಾರ್ ಅವರಂತಹ ಪ್ರಬಲ ನಾಯಕರನ್ನು ಎದುರಿಸಲು ಬಿಜೆಪಿಗೆ ಒಗ್ಗಟ್ಟಿನ ನಾಯಕತ್ವದ ಅಗತ್ಯವಿದೆ.

ಪರ್ಯಾಯ ನಾಯಕರ ಕೊರತೆಯಿದೆ ಎಂಬ ಚರ್ಚೆಯೂ ಇದೆ. ಅನುಭವಿ ನಾಯಕರು ಅನೇಕರಿದ್ದರೂ, ಚುನಾವಣಾ ನಿರ್ವಹಣೆ ಮತ್ತು ಸಂಪನೂಲ ಕ್ರೋಢೀಕರಣದಲ್ಲಿ ವಿಜಯೇಂದ್ರ ಅವರ ಹಿಡಿತವನ್ನು ಮೀರಿಸುವಂತಹ ಹೊಸ ಮುಖವನ್ನು ಕಂಡುಕೊಳ್ಳುವುದು ವರಿಷ್ಠರಿಗೆ ಸದ್ಯಕ್ಕೆ ಕ್ಲಿಷ್ಟಕರವಾಗಿದೆ.

ಕೆಲ ಹಿರಿಯ ನಾಯಕರು ಪಕ್ಷದ ಕಾರ್ಯಶೈಲಿ ಬಗ್ಗೆ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಕ್ಷವು ಹೆಚ್ಚು ಆಕ್ರಮಣಕಾರಿಯಾಗಿರಬೇಕು ಮತ್ತು ತಳಮಟ್ಟದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬ ಒತ್ತಡ ಹೈಕಮಾಂಡ್ ಮೇಲಿದೆ.ಬಿ.ಶ್ರೀರಾಮುಲು, ವಿ. ಸೋಮಣ್ಣ, ವಿ. ಸುನಿಲ್ ಕುಮಾರ್, ಅರವಿಂದ ಬೆಲ್ಲದ ಅವರಂತಹ ಹೆಸರುಗಳು ಪದೇ ಪದೇ ಚರ್ಚೆಗೆ ಬರುತ್ತಿವೆ. ಈ ಪೈಕಿ ಯಾರೊಬ್ಬರನ್ನೂ ಅಂತಿಮಗೊಳಿಸಲು ಸಾಧ್ಯವಾಗದಿರುವುದು ಕಾರ್ಯಕರ್ತರಲ್ಲಿ ಗೊಂದಲಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿ ಡಿಕೆ ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕವಾಗಿರುವುದು ಬಿಜೆಪಿಯ ತಂತ್ರಗಾರಿಕೆಯನ್ನು ಬದಲಾಯಿಸಿದೆ. ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಚತುರತೆ ಮತ್ತು ಸಂಘಟನಾ ಕೌಶಲವನ್ನು ತಡೆಗಟ್ಟಲು ಬಿಜೆಪಿ ತನ್ನ ತಂತ್ರವನ್ನು ಮರುರೂಪಿಸುತ್ತಿದೆ.

ಸದ್ಯದ ಪರಿಸ್ಥಿತಿಯಲ್ಲಿ, ವರಿಷ್ಠರು ತರಾತುರಿಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಬದಲು, ಸ್ಥಳೀಯ ನಾಯಕರ ಅಭಿಪ್ರಾಯ ಮತ್ತು ರಾಜ್ಯದ ಸಾಮಾಜಿಕ ವಾಸ್ತವಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಪ್ರಕಟಿಸುವ ಸಾಧ್ಯತೆಯಿದೆ.

ಆಂತರಿಕ ಭಿನ್ನಾಭಿಪ್ರಾಯ: ಪಕ್ಷದ ಹಿರಿಯ ನಾಯಕರ ಒಂದು ಬಣವು ವಿಜಯೇಂದ್ರ ಅವರ ಕಾರ್ಯವೈಖರಿ ಮತ್ತು ನೇಮಕಾತಿಯ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾ ಬಂದಿದೆ. ಈ ಆಂತರಿಕ ಭಿನ್ನಮತಗಳು ಆಯ್ಕೆ ಪ್ರಕ್ರಿಯೆಯ ಸಮಯದಲ್ಲಿ ಗೊಂದಲಗಳಿಗೆ ಕಾರಣವಾಗಿದ್ದವು.ಕರ್ನಾಟಕದ ರಾಜಕೀಯದಲ್ಲಿ ವಿವಿಧ ಸಮುದಾಯಗಳ ಪ್ರಾತಿನಿಧ್ಯ ಬಹಳ ಮುಖ್ಯ. ಪಕ್ಷವು ರಾಜ್ಯದಲ್ಲಿ ಹೊಸದಾಗಿ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸಬೇಕಾದ ಸವಾಲು ಎದುರಿಸುತ್ತಿರುವಾಗ, ಜಾತಿ ಸಮೀಕರಣಗಳು ಮತ್ತು ನಾಯಕತ್ವದ ಆಯ್ಕೆ ಕುರಿತು ವರಿಷ್ಠರು ಹೆಚ್ಚು ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗುತ್ತದೆ.

ಸಂಘಟನಾತ್ಮಕ ಸವಾಲು: ಇತ್ತೀಚಿನ ರಾಜಕೀಯ ಬೆಳವಣಿಗೆಗಳು, ಅಂದರೆ ಡಿ.ಕೆ. ಶಿವಕುಮಾರ್ ಅವರ ಮುಖ್ಯಮಂತ್ರಿ ನೇಮಕದ ನಂತರ, ಬಿಜೆಪಿ ತನ್ನ ತಂತ್ರಗಾರಿಕೆಯನ್ನು ಮರುರೂಪಿಸಬೇಕಾದ ಅನಿವಾರ್ಯತೆಯಲ್ಲಿದೆ. ಅಂತಹ ಸಂದರ್ಭಗಳಲ್ಲಿ ಪಕ್ಷದ ಒಳಗಿನ ಒಗ್ಗಟ್ಟು

3ನೇ ಪುಟ.....

ದೇಶದ ಜನರಲ್ಲಿ ಭಾವೈಕ್ಯತೆ ಮೂಡಿಸಿದ ಛತ್ರಪತಿ ಶಿವಾಜಿ ಮಹಾರಾಜರು. ಡಾ. ಬಿರಾದಾರ್

ಸಿಂಧನೂರು ಸಂಜೆ

ರಾಯಚೂರು,ಜೂ.07-

ಸಹಾಜಿಭೋಸ್ಲೆ .ಜಿಜಾಬಾಯಿ ಅವರ ಮಗನಾದ ದಾದಾಜಿ ಕೊಂಡ ದೇವರ ನೆಚ್ಚಿನ ಶಿಷ್ಯನಾದ ದೇಶದ ಇತಿಹಾಸದಲ್ಲಿ ಭವ್ಯ ಭಾರತದಲ್ಲಿ ಜನರಲ್ಲಿ ಒಗ್ಗಟ್ಟು ಏಕತೆ ಭಾವೈಕ್ಯತೆಯ ಪರಿಕಲ್ಪನೆಯನ್ನು ಮರಾಠಿ ಸಾಮ್ರಾಜ್ಯವನ್ನು ಒಗ್ಗೂಡಿಸುವುದರ ಮೂಲಕ ಜನರಲ್ಲಿ ಭಾವೈಕ್ಯತೆಯ ಬೀಜವನ್ನ ಬಿತ್ತಿ ಭವ್ಯ ಭಾರತದ ಒಗ್ಗೂಡಿಸುವ ಪ್ರಯತ್ನ ಕಾರ್ಯ ಮಾಡಿದ ದೇಶಭಕ್ತ ಅದನ್ನ 1674 ರಾಯಗಡದಲ್ಲಿ ವಿಧಿ ವಿಧಾನಗಳ ಮೂಲಕ ಭವ್ಯ ದಿವ್ಯವಾಗಿ ಪಟ್ಟಾಭಿಷೇಕವನ್ನು ಸ್ವೀಕರಿಸಿದ ಮಹಾನ್ ಪುರುಷ ಛತ್ರಪತಿ ಶಿವಾಜಿ ಮಹಾರಾಜರು ಎಂದು ದಿನಾಂಕ 6/



6/ 2026 ರಂದು ಸಾಯಂಕಾಲ 6 ಗಂಟೆಗೆ ನಡೆದ ರಾಯಚೂರು ನಗರದ ಕಾಸಭಾವಿ ಹತ್ತಿರ ಇರುವ ಅಂಬಾಭವಾನಿ ದೇವಸ್ಥಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ದಿನಾಚರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಿವಾಜಿಯವರ ಭಾವಚಿತ್ರಕ್ಕೆ ಮಾಲಾರ್ಪಣೆ ಪುಷ್ಪಾರ್ಪಣೆ ನಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ್ ಮಾತನಾಡಿದರು . ನಂತರ ಅವರು ಮುಂದುವರೆದು ಮಾತನಾಡುತ್ತಾ .ಭವ್ಯ ಭಾರತದ ಹಲವಾರು ರಾಜರ ಆಡಳಿತವನ್ನು ಮಾಡಿದರು. ಆದರೆ ಶಿವಾಜಿ ಮಹಾರಾಜ ಉತ್ತಮ ಆಡಳಿತ ಮಾಡುವುದರ ಜೊತೆಗೆ .ಸರ್ವ ಜನಾಂಗದ ಸರ್ವ ವರ್ಗದ ಎಲ್ಲರನ್ನೂ ಸಮಾನ ರೀತಿಯಲ್ಲಿ ಕಂಡು .ಇಡೀ ಭವ್ಯ ಭಾರತವನ್ನ ಜನರಲ್ಲಿ ಭಾವೈಕ್ಯತೆಯ ಬೀಜವನ್ನ ಬಿತ್ತಿ ವಿಶೇಷವಾಗಿ ಮರಾಠ ಸಾಮ್ರಾಜ್ಯವನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ವಿಶೇಷವಾಗಿ 1674ರಲ್ಲಿ ಛತ್ರಪತಿ ಎಂಬ ಬಿರುದುನೊಂದಿಗೆ ಪಟ್ಟಾಭಿಷೇಕವನ್ನು ಜೂನ್ 6 ರಂದು ನಡೆದ ಸಂದರ್ಭದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಬಹಳ ಅರ್ಥಪೂರ್ಣವಾಗಿ ಮಾತುಗಳನ್ನು ಹಾಡಿದರು .ಅವರ ಮಾತುಗಳು ಏನೆಂದರೆ, ಆತ್ಮವಿಶ್ವಾಸವು ಶಕ್ತಿಯನ್ನು ನೀಡುತ್ತದೆ .ಮತ್ತು ಶಕ್ತಿ ಜ್ಞಾನವನ್ನು ನೀಡುತ್ತದೆ .ಜ್ಞಾನವು ಸ್ಥಿರತೆಯನ್ನು ಒದಗಿಸುತ್ತದೆ .ಸ್ಥಿರತೆಯು ವಿಜಯಕೆ ಕಾರಣವಾಗುತ್ತದೆ ಎಂಬುದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು. ಏಕೆಂದರೆ ಯುದ್ಧದ ಸಮಯದಲ್ಲಿ ಶಕ್ತಿಯಿಂದ ಸಾಧಿಸಲಾಗದ ವಿಷಯಗಳನ್ನು ಜ್ಞಾನ ಮತ್ತು ತಂತ್ರಗಳಿಂದ ಸಾಧಿಸಬಹುದು .ಮತ್ತು ಜ್ಞಾನವು ಶಿಕ್ಷಣದಿಂದ ಬರುತ್ತಿದೆ ಎಂದು ಹೇಳಿದರು. ಮಹಿಳೆಯರ ಎಲ್ಲಾ ಹಕ್ಕುಗಳಲ್ಲಿ ತಾಯಿಯಾಗಿರುವುದು ದೊಡ್ಡದು ಎಂಬುದು ಪ್ರತಿಯೊಬ್ಬರ ತಿಳಿದುಕೊಳ್ಳಬೇಕು .ಧರ್ಮ ಸತ್ಯ ಶ್ರೇಷ್ಠತೆ ಮತ್ತು ದೇವರ ಮುಂದೆ

3ನೇ ಪುಟ.....

ಸಸಿ ನೆಟ್ಟು ಶಾಸಕ ದದ್ದಲ ಬಸವಗೌಡ ಆಪ್ತ - ಕಾಂಗ್ರೆಸ್ ಯುವ ಮುಖಂಡ ಹುಲಿನಾಯಕ ಹುಟ್ಟುಹಬ್ಬ ಆಚರಣೆ

ಸಿರವಾರ.ಜೂ.07-

ಶಾಲೆಯ ಆವರಣದಲ್ಲಿ ಸಸಿ ಗಳನ್ನು ನೇಡುವ ಮೂಲಕ ಹೀಗೂ ಹುಟ್ಟ ಆಚರಣೆ ಮಾಡಬಹುದು ಎಂದು ರಾಯಚೂರು ಗ್ರಾಮೀಣ ಶಾಸಕರಾದ ದದ್ದಲ ಬಸವಗೌಡ ಆಪ್ತ - ಕಾಂಗ್ರೆಸ್ ಯುವ ಮುಖಂಡ ಹುಲಿನಾಯಕ ಹುಟ್ಟುಹಬ್ಬ ಆಚರಣೆ ಮಾಡಿಕೊಂಡರು. .

ನಂತರ ಮಾತನಾಡಿದ ಹುಲಿ ನಾಯಕ ಜೂನ್ 5 ರಂದು ಪರಿಸರ ದಿನಾಚರಣೆ ಇದೇ, ಜೂನ್ 6 ನನ್ನ ಹುಟ್ಟುಹಬ್ಬ ಇದೇ ಅದರ ಅಂಗ ವಾಗಿ ಕಾಲೇಜಿನ ಆವರಣದಲ್ಲಿ ಸಸಿ ನೆಡುವ ಮೂಲಕ ಆಚರಿಸಿ ಎಂದು ಕೇಲವರು ಹೇಳಿದ ಕಾರಣ ಈ ರೀತಿ ಆಚರಣೆ ಮಾಡಿದೆವೆ. ಪ್ರತಿಯೊಬ್ಬ ಪ್ರತಿ ವರ್ಷ ತಮ್ಮ ಮನೆಯಲ್ಲಿ ಹೊಲದಲ್ಲಿ ಶಾಲಾ ಕಾಲೇಜುಗಳಲ್ಲಿ



ಗಿಡಮರಗಳನ್ನು ಬೆಳೆಸಿ ಸರಕ್ಷಣೆ ಮಾಡಬೇಕು ಇವುಗಳನ್ನು ಬೆಳಸುವದರಿಂದ ನಮಗೆ ಒಳ್ಳೆಯ ಗಾಳಿ. ಮಳೆ ಬೆಳೆ ವಾತಾವರಣ ಸಮೃದ್ಧಿಯಾಗಲಿಕ್ಕೆ ಸಾಧ್ಯವಾಗು ತ್ತದೆ ಎಂದರು ಈ ಸಂದರ್ಭದಲ್ಲಿ ಕಾ.ನಿ.ಪ.ಸಂಘದ ತಾಲೂಕ ಅದ್ಯಕ್ಷ ಹನಮೇಶ, ಯುವ ಮುಖಂಡರಾದ ಮಲ್ಲಿಕಾರ್ಜುನ ಸಿಕಂಟಿಗೌಡ, ರವಿನಾಯಕ, ಪತ್ರಕರ್ತ ಅಪ್ಪಾಜಿ ನಾಯಕ, ಟಿ.ರಮೇಶ ನಾಯಕ, ರಾಜು ನಾಯಕ, ಬಸವರಾಜ ಟಿವಿಎಸ್, ಬೊಂಬಾಯಿ, ರಮೇಶ ಬಲ್ಲಟಗಿ, ಹಂಪಣ್ಣ, ವಿನೋದ, ಹನುಮೇಶ ಜಾಡಲದಿನ್ನಿ ಇನ್ನಿತರರು ಇದರು

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ



ರಾಯಚೂರು,ಜೂ.07-

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ . ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಪ್ರಮುಖ ಖಾತೆಯ ಸಚಿವ ಸ್ಥಾನ ನೀಡಬೇಕು ಎಂದು ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎನ್. ಬುಗ್ಗಾರೆಡ್ಡಿ ಒತ್ತಾಯಿಸಿದರು.

ಭಾನುವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಉಪ್ಪಾರ ಸಮಾಜದ ಸುಮಾರು 25 ರಿಂದ 30 ಲಕ್ಷ ಮತದಾರರಿದ್ದು, ಕಳೆದ ವಿಧಾನ'ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯಾದ್ಯಂತ ವ್ಯಾಪಕ ಬೆಂಬಲ ನೀಡಿದೆ. ಇದರ ಪರಿಣಾ ಮ ವಾಗಿ ಕಾಂಗ್ರೆಸ್ ಪಕ್ಷವು 135 ಕ್ಷೇತ್ರಗಳಲ್ಲಿ ಜಯಗಳಿಸಿ ಸರ್ಕಾರ ರಚಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಹಿಂದುಳಿದ ವರ್ಗಕ್ಕೆ ಸೇರಿದ ಉಪ್ಪಾರ ಸಮಾಜದ ಏಕೈಕ ಶಾಸಕರಾಗಿರುವ ಸಿ. ಪುಟ್ಟರಂಗ ಶೆಟ್ಟಿಯನ್ನು ಸೋಲಿಸಲು ಪ್ರಯತ್ನಿ ಸಿತ್ತು. ಆದರೆ ಕ್ಷೇತ್ರದ ಮತದಾರರು ಸ್ಥಳೀಯ ಅಭ್ಯರ್ಥಿಯ ಪರವಾಗಿ ನಿಂತು ಅವರಿಗೆ ಭಾರೀ ಬೆಂಬಲ ನೀಡುವ ಮೂಲಕ ಸತತ ನಾಲ್ಕನೇ ಬಾರಿಗೆ ವಿಧಾನಸಭೆಗೆ ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದರು.

ಉಪ್ಪಾರ ಸಮಾಜವು ಮುಖ್ಯಮಂತ್ರಿ ಅವರ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ಒಗ್ಗಟ್ಟಿನಿಂದ ಬೆಂಬಲ ನೀಡಿದ್ದು, ಪಕ್ಷದ ಬಹುಮತದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಹೀಗಾಗಿ ಸಮಾಜದ ಪ್ರತಿನಿಧಿಯಾಗಿ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಉಪ್ಪಾರ ಸಮಾಜಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಾಗೇಶ್ ಕೂಡ್ಲುರು, ಬಸವರಾಜ, ಗಂಗಪ್ಪಯ್ಯ ಪೂಜಾರಿ, ಗೂಳಪ್ಪ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಲಕ್ಷ್ಮಣ್ ಸವದಿಗೆ ಡಿಸಿಎಂ ಸ್ಥಾನ ನೀಡಲು ಗಾಣಿಗ ಸಮಾಜದ ಒತ್ತಾಯ



ರಾಯಚೂರು,ಜೂ.07-

ಮಾಜಿ ಉಪಮುಖ್ಯಮಂತ್ರಿ ಹಾಗೂ ಲಕ್ಷ್ಮಣ್ ಸವದಿ ಅವರಿಗೆ ರಾಜ್ಯ ಸರ್ಕಾರದಲ್ಲಿ ಮತ್ತೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಗಾಣಿಗ ಸಮಾಜದ ಜಿಲ್ಲಾ ಅಧ್ಯಕ್ಷ ಚನ್ನಪ್ಪ ಸಜ್ಜನ್ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಉಪ'ಮು'ಖ್ಯ'ಮಂತ್ರಿಯಾಗಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವ ಲಕ್ಷ್ಮಣ್ ಸವದಿ ಅವರಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಗಾಣಿಗ ಸಮಾಜದ ಹಿರಿಯ ನಾಯಕರಾಗಿರುವ ಲಕ್ಷ್ಮಣ್ ಸವದಿ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವುದರ ಜೊತೆಗೆ ಸಮಾಜದ ಶಾಸಕರಾದ ಸಂಗಮೇಶ, ಸಂತೋಷ್ ಹಾಗೂ ವೀರೇಂದ್ರ ಪಪ್ಪಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಗಾಣಿಗ ಸಮುದಾಯವು ಕಾಂಗ್ರೆಸ್ ಪಕ್ಷಕ್ಕೆ ನಿರಂತರ ಬೆಂಬಲ ನೀಡುತ್ತಿದ್ದು, ಸಮಾಜದ ನಾಯಕರಿಗೆ ಸೂಕ್ತ ರಾಜಕೀಯ ಪ್ರತಿನಿಧಿತ್ವ ಹಾಗೂ ಸ್ಥಾನಮಾನ ನೀಡದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹೋರಾಟ ಮತ್ತು ಪ'ತಿ'ಭ'ಟನೆ'ಗಳನ್ನು ಹ'ಮ್ಮಿಕೊಳ್ಳುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ, ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಸಮುದಾಯದ ಮಟ್ಟದಲ್ಲಿ ಚರ್ಚೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸ'ಂದ್ದಿಗೋಷ್ಠಿಯಲ್ಲಿ ಬಸವರಾಜ್ ಸಂಗಮೇಶ್ವರ, ಬಸಪ್ಪ ಹಾಗೂ ಶಂಕ್ರಪ್ಪ ಉಪಸ್ಥಿತರಿದ್ದರು.

3ನೇ ಪುಟ.....

ಗ್ಯಾಸ್ ಬೆಲೆ ಮತ್ತೇ 29 ಏರಿಕೆ

ಬೆಂಗಳೂರು,ಜೂ.07-

ದಿನದಿಂದ ದಿನಕ್ಕೆ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆ ನಡುವೆ ಇದೀಗ ಅಡುಗೆ ಅನಿಲ ದರವೂ ಮತ್ತೊಮ್ಮೆ ಹೆಚ್ಚಳ ಕಂಡಿದೆ. ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್‌ಗೆ 29 ರೂಪಾಯಿ ಹೆಚ್ಚಳವಾಗಿದ್ದು, ಹೊಸ ದರಗಳು ದೇಶಾದ್ಯಂತ ಜಾರಿಗೆ ಬಂದಿವೆ.

ಮೂರು ತಿಂಗಳಲ್ಲಿ ಎರಡನೇ ಬಾರಿ ದರ ಹೆಚ್ಚಳ ಕಳೆದ ಕೆಲ ತಿಂಗಳುಗಳಿಂದ ಇಂಧನ ಮಾರುಕಟ್ಟೆಯಲ್ಲಿ ಕಂಡುಬರುತ್ತಿರುವ ಏರಿಳಿತದ ಪರಿಣಾಮವಾಗಿ ಸಿಲಿಂಡರ್ ದರ ಮತ್ತೆ ಹೆಚ್ಚಾಗಿದೆ. ಈ ಹಿಂದೆ ಮಾರ್ಚ್ ತಿಂಗಳಲ್ಲಿಯೂ ದರ ಏರಿಕೆ ಮಾಡಲಾಗಿತ್ತು. ಹೊಸ ಪರಿಷ್ಕರಣೆಯ ಬಳಿಕ ದೆಹಲಿಯಲ್ಲಿ ಗೃಹಬಳಕೆಯ ಸಿಲಿಂಡರ್ ಬೆಲೆ 942 ರೂಪಾಯಿಗೆ ಏರಿಕೆಯಾಗಿದೆ. ವಾಣಿಜ್ಯ ಸಿಲಿಂಡರ್ ದರದಲ್ಲೂ ಹೆಚ್ಚಳ ಗೃಹಬಳಕೆಯ ಸಿಲಿಂಡರ್ ಮಾತ್ರವಲ್ಲದೆ, 19 ಕೆಜಿ ವಾಣಿಜ್ಯ ಸಿಲಿಂಡರ್ ದರದಲ್ಲೂ ಇತ್ತೀಚೆಗೆ ಏರಿಕೆ ಮಾಡಲಾಗಿತ್ತು. ಇದರ ಪರಿಣಾಮವಾಗಿ ಹೋಟೆಲ್ ಹಾಗೂ ಆಹಾರ ಉದ್ಯಮಗಳ ಮೇಲೂ ಹೆಚ್ಚುವರಿ ಹೊರೆ ಬೀಳುವ ಸಾಧ್ಯತೆ ಇದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ತೈಲ ಮತ್ತು ಅನಿಲ ಬೆಲೆ ಏರಿಕೆಯಿಂದ ಆಮದು ವೆಚ್ಚ ಹೆಚ್ಚಾಗಿದೆ. ಇದೇ ಕಾರಣದಿಂದ ತೈಲ ಕಂಪನಿಗಳು ದರ ಪರಿಷ್ಕರಣೆ ಮಾಡಿವೆ. ನಷ್ಟ ಸರಿದೂಗಿಸಲು ಕ್ರಮ ಅಂತಾರಾಷ್ಟ್ರೀಯ ಬೆಲೆ ಏರಿಕೆಯ ನಡುವೆಯೂ ಕಡಿಮೆ ದರದಲ್ಲಿ ಸಿಲಿಂಡರ್ ಪೂರೈಕೆ ಮಾಡುತ್ತಿದ್ದ ತೈಲ ಕಂಪನಿಗಳಿಗೆ ನಷ್ಟ ಉಂಟಾಗುತ್ತಿತ್ತು. ಈ ನಷ್ಟದ ಪ್ರಮಾಣವನ್ನು ಭಾಗಶಃ ಕಡಿಮೆ ಮಾಡುವ ಉದ್ದೇಶದಿಂದ ಹೊಸ ದರ ಜಾರಿಗೊಳಿಸಲಾಗಿದೆ. ಇನ್ನೂ ನಷ್ಟದ ಭಾರ ಮುಂದುವರಿಕೆ ಸರ್ಕಾರ ಹಾಗೂ ತೈಲ ಕಂಪನಿಗಳು ಪ್ರತಿ ಸಿಲಿಂಡರ್ ಮೇಲೂ ಗಮನಾರ್ಹ ಪ್ರಮಾಣದ ನಷ್ಟವನ್ನು ಭರಿಸುತ್ತಿದ್ದು, ಸದ್ಯವೂ ಆರ್ಥಿಕ ಒತ್ತಡ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಂಗಾವತಿ: ಮನೆಯವರಿಗೆ ಚಾಕುವಿನಿಂದ ಇರಿದ ಮಗ: ಅಕ್ಕ, ತಂದೆ ಸಾವು; ತಾಯಿ ಸ್ಥಿತಿ ಗಂಭೀರ

ಗಂಗಾವತಿ (ಕೊಪ್ಪಳ): ಮಗನೋರ್ವ ಮಾನಸಿಕ ನಿಯಂತ್ರಣ ಕಳೆದುಕೊಂಡು ತಂದೆ-ತಾಯಿ ಸೇರಿದಂತೆ ಕುಟುಂಬಸ್ಥರ ಮೇಲೆಯೇ ಚಾಕುವಿನಿಂದ ದಾಳಿ ಮಾಡಿರುವ ಘಟನೆ ತಾಲೂಕಿನ ಅಯೋಧ್ಯೆ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ. ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿದ್ದು, ಇನ್ನಿಬ್ಬರು ಗಾಯಗೊಂಡಿದ್ದಾರೆ. ಆರೋಪಿಯು ಆನ್‌ಲೈನ್ ಪಬ್ ಜೀ ಗೇಮ್ ವ್ಯಸನಿಯಾಗಿದ್ದು, ಈ ಹಿನ್ನೆಲೆಯಲ್ಲಿ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

ಪಿಯುಸಿ ಓದುತ್ತಿರುವ ಸಾಯಿ ವೆಂಕಟಮಣಿ (18) ಚಾಕು ಇರಿದಿರುವ ಆರೋಪಿ. ನಿನ್ನೆ ರಾತ್ರಿ ಹತ್ತು ಗಂಟೆಯ ಸುಮಾರಿಗೆ ಈ ಘಟನೆ ನಡೆದಿದೆ. ಮಗ ಚಾಕುವಿನಿಂದ ತಾಯಿ ಸೌಜನ್ಯ (40), ಅಕ್ಕ ಪ್ರಗತಿ (19) ಮತ್ತು ತಂದೆ ವೆಂಕಟ ನಾಯ್ಡು ಅವರ ಮೇಲೆ ದಾಳಿ ಮಾಡಿ, ಬಳಿಕ ತನಗೂ ಇರಿದುಕೊಂಡಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ. ಇರಿತದ ಪರಿಣಾಮ ತೀವ್ರ ರಕ್ತಸ್ರಾವವಾಗಿ ಅಕ್ಕ ಸ್ಥಳದಲ್ಲಿಯೇ ಮೃತರಾಗಿದ್ದಾರೆ. ತೀವ್ರ ಗಾಯಗೊಂಡಿದ್ದ ತಂದೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಅವರೂ ಕೂಡ ಚಿಕಿತ್ಸೆ ಫ'ಲಕಾರಿಯಾಗ'ದೇ ಸಾವನ್ನಪ್ಪಿದ್ದಾರೆ. ತೀವ್ರ ಗಾಯಗೊಂಡ ತಾಯಿಯನ್ನು ಬಳ್ಳಾರಿಯ ವಿಮ್ಸ್‌ಗೆ ದಾಖಲಿಸಲಾಗಿದೆ. ಕುಟುಂಬಸ್ಥರ ಮೇಲೆ ಚಾಕು ದಾಳಿ ಮಾಡಿದ ಬಳಿಕ ತನಗೂ ಇರಿದುಕೊಂಡು ಗಾಯಗೊಂಡ ಯುವಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಂಗಾವತಿ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್.ಅರಸಿದ್ದಿ, ಡಿವೈಎಸ್‌ಪಿ, ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಶನಿವಾರ 7 ಗಂಟೆ ಸುಮಾರಿಗೆ ಈ ಕುಟುಂಬದವರು, ವೆಂಕಟ ನಾಯ್ಡು, ಅವರ ಪತ್ನಿ ಸೌಜನ್ಯ, ಮಗಳು ಪ್ರಗತಿ, ಮಗ ಸಾಯಿ ಹಾಗೂ ವೆಂಕಟ ನಾಯ್ಡು ಅವರ ಅಪ್ಪ-ಅಮ್ಮ ಹಣ್ಣುಹಂಪಲು ತಿಂದು, ಬಳಿಕ ರಾತ್ರಿ 9 ಗಂಟೆಗೆ ಊಟ ಮಾಡಿ ಮಲಗಿದ್ದರು. ಸುಮಾರು 10 ಗಂಟೆಗೆ ಮನೆಯಲ್ಲಿ ಜೋರಾದ ಶಬ್ದ ಕೇಳಿಬಂದಿದ್ದು, ವೆಂಕಟ ನಾಯ್ಡು ಅವರ ತಂದೆ ಪಕ್ಕದ ಮನೆಯವರ ಸಹಾಯದೊಂದಿಗೆ ರೂಮ್ ಬಾಗಿಲು ತೆರೆದಾಗ 4 ಜನರೂ ಗಾಯಗೊಂಡಿದ್ದರು. ವೆಂಕಟ ನಾಯ್ಡು, ಪತ್ನಿ ಸೌಜನ್ಯ, ಮಗಳು ಪ್ರಗತಿಗೆ ಗಂಭೀರ ಗಾಯಗಳಾಗಿದ್ದರೆ, ಮಗನಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ತಕ್ಷಣ ಗಂಗಾವತಿ ಆಸ್ಪತ್ರೆಗೆ ಕರೆದೊಯ್ದಾಗ ಪ್ರಗತಿ ಸಾವನ್ನಪ್ಪಿದ್ದರು. ಅಲ್ಲಿಂದ ಉಳಿದವರನ್ನು ಬಳ್ಳಾರಿ ಆಸ್ಪತ್ರೆಗೆ ದಾಖಲಿಸಿದ್ದು, ಭಾನುವಾರ ಬೆಳಗ್ಗೆ ವೆಂಕಟ ನಾಯ್ಡು

3ನೇ ಪುಟ.....

ಸೋಲಾರ್ ಪಾರ್ಕ್: ಖಾಸಗಿ ಕಂಪನಿಗಳಿಂದ ರೈತರಿಗೆ ಅನ್ಯಾಯವಾಗದಿರಲಿ: ಶಾಸಕ ಪ್ರಭು ಚವ್ಹಾಣ



ಔರಾದ್,ಜೂ.07-
ಕಮಲಗರ ತಾಲ್ಲೂಕಿನಲ್ಲಿ ಬೃಹತ್ ಪವರ್ ಗ್ರಿಡ್ ಉಪ ಕೇಂದ್ರದ ಜೊತೆಗೆ ಸುಮಾರು 25 ಸಾವಿರ ಎಕರೆಯಲ್ಲಿ ಬೃಹತ್ ಸೋಲಾರ್ ಪಾರ್ಕ್ ಯೋಜನೆ ನಡೆಯುತ್ತಿದೆ. ಈ ಯೋಜನೆಗೆ ಜಮೀನು ನೀಡುತ್ತಿರುವ ರೈತರಿಗೆ ಅನ್ಯಾಯವಾಗಬಾರದು ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ಮಾಳೆಗಾಂವ ಚಿಮ್ಮೇಗಾಂವ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಪವರ್ ಗ್ರಿಡ್ ಸಬ್ ಸ್ಟೇಷನ್ ಕಾಮಗಾರಿ ಸ್ಥಳಕ್ಕೆ ಜೂ. 6ರಂದು ಭೇಟಿ ನೀಡಿ ಕಾಮಗಾರಿ ವೀಕ್ಷಿಸಿ ಅವರು ಮಾತನಾಡಿದರು. ಸೋಲಾರ್ ಪಾರ್ಕ್ ಯೋಜನೆಗಾಗಿ ಅನೇಕ ಖಾಸಗಿ ಕಂಪನಿಗಳು ನೇರವಾಗಿ ರೈತರನ್ನು ಭೇಟಿಯಾಗಿ ಜಮೀನು ಪಡೆಯುತ್ತಿವೆ. ರೈತರ ಮುಗ್ಧತೆಯನ್ನು ದುರುಪಯೋಗ ಮಾಡಿಕೊಂಡು ಕಡಿಮೆ ಹಣ ಕೊಡುತ್ತಿರುವುದು ಗಮನಕ್ಕೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಮಲನಗರ ತಾಲ್ಲೂಕಿನ ಮುರ್ಕಿ, ಠಾಣಾ ಕುಶನೂರ, ಚಿಕ್ಲಿ(ಯು), ಚಿಮ್ಮೇಗಾಂವ ಸೇರಿದಂತೆ ಮತ್ತಿತರೆ ಗ್ರಾಮಗಳಲ್ಲಿ ಯೋಜನೆಗಾಗಿ ಜಮೀನು ಪಡೆಯುವ ಕೆಲಸ ನಡೆಯುತ್ತಿದೆ. ಈ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ಈ ಯೋಜನೆ ಯಶಸ್ವಿಯಾಗಬೇಕು. ಆದರೆ ತಮ್ಮ ಬದುಕಿಗೆ ಆಸರೆಯಾದ ಜಮೀನನ್ನು ನೀಡುತ್ತಿರುವ ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗಬಾರದು ಎಂದು ಖಾಸಗಿ ಕಂಪನಿಗಳಿಗೆ ಎಚ್ಚರಿಸಿದರು.

ಇಂತಹದ್ದೇ ಯೋಜನೆಗೆ ಮಹಾರಾಷ್ಟ್ರದಲ್ಲಿ ಜಮೀನಿಗೆ ಪ್ರತಿ ಎಕರೆಗೆ 50 ಸಾವಿರ ನಿಗದಿಪಡಿಸಲಾಗಿದ್ದು, ಆದರೆ ನಮ್ಮ ಭಾಗದಲ್ಲಿ 30 ರಿಂದ 35 ಸಾವಿರ ಮಾತ್ರ ನೀಡಲಾಗುತ್ತಿದೆ ಎಂದು ಬಹಳಷ್ಟು ರೈತರು ನನ್ನನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹಂಚಿಕೊಂಡಿದ್ದಾರೆ. ಕಂಪನಿಗಳು ಈ ರೀತಿಯ ತಾರತಮ್ಯ ಮಾಡದೇ, ನಮ್ಮ ರೈತರಿಗೆ ನ್ಯಾಯಯುತ ಹಾಗೂ ಸೂಕ್ತ ಬೆಲೆ ನೀಡಬೇಕು ಎಂದು ಒತ್ತಾಯಿಸಿದರು.

ಪವರ್ ಗ್ರಿಡ್ ಉಪ ಕೇಂದ್ರ ಪರಿಶೀಲನೆ: ಪವರ್ ಗ್ರಿಡ್ ಉಪ ಕೇಂದ್ರದಲ್ಲಿ ಸಂಚರಿಸಿ ಎಲ್ಲ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದರು. ಕಾಮಗಾರಿ ಗುಣಮಟ್ಟದಿಂದ ಮತ್ತು ಕಾಲಮಿತಿಯೊಳಗಾಗಿ ಪೂರ್ಣಗೊಳಿಸಬೇಕು. ಕ್ಯೂರಿಂಗ್ ಸರಿಯಾಗಿ ಮಾಡಬೇಕು. ಗುಣಮಟ್ಟದ ಕುರಿತಂತೆ ಯಾವುದೇ ರೀತಿಯ ದೂರುಗಳು ಬಾರದಂತೆ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಔರಾದ(ಬಿ) ಕ್ಷೇತ್ರಕ್ಕೆ ದೊಡ್ಡ ಯೋಜನೆ ತರಬೇಕೆಂಬುದು ನನ್ನ ಬಹಳಷ್ಟು ದಿನಗಳ ಕನಸಾಗಿತ್ತು. ಇದಕ್ಕಾಗಿ ಸುಮಾರು 15 ವರ್ಷಗಳ ಕಾಲ ಸತತ ಪ್ರಯತ್ನಪಟ್ಟಿದ್ದೇನೆ. ಅದರಂತೆ ಸಾಕಷ್ಟು ಪ್ರಯತ್ನ ವಹಿಸಿ ಪವರ್ ಗ್ರಿಡ್ ಉಪ ಕೇಂದ್ರವನ್ನು ತಂದಿದ್ದೇನೆ. ಕೇಂದ್ರ ಸರ್ಕಾರದ ಯೋಜನೆ ಇದಾಗಿದ್ದು, 2360 ಕೋಟಿ ಮೊತ್ತದ ಬೃಹತ್ ಯೋಜನೆ 164 ಎಕರೆಯಲ್ಲಿ ಭವ್ಯವಾಗಿ ನಿರ್ಮಾಣಗೊಳ್ಳುತ್ತಿದೆ. ಇಲ್ಲಿಂದ ಹೈದ್ರಾಬಾದ, ಕರನೂಲ, ಮಹಾರಾಷ್ಟ್ರ ರಾಜ್ಯದ ಪರಳಿಗೆ ವಿದ್ಯುತ್ ಲೈನ್ ಹೋಗುತ್ತದೆ. ಈ ಯೋಜನೆಯ ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದೆ. ಪ್ರಧಾನಿಯವರಿಂದಾಗಿ ಈ ಯೋಜನೆ ಕಾರ್ಯರೂಪಕ್ಕೆ ಬಂದಿದ್ದರಿಂದ ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟನೆಗೆ ಬರಬೇಕೆಂಬುದು ನನ್ನ ಬಯಕೆಯಾಗಿದೆ. ಅವರನ್ನು ಬರುವಂತೆ ಪ್ರಾರ್ಥಿಸುತ್ತೇನೆ ಎಂದು ಶಾಸಕರು ತಿಳಿಸಿದರು.

ನನ್ನ ಆಶಯದಂತೆ ಕಾಮಗಾರಿ ಸ್ಥಳದಲ್ಲಿ ತಾಂತ್ರಿಕ ಹುದ್ದೆಗಳನ್ನು ಹೊರತುಪಡಿಸಿ ಉಳಿದೆಲ್ಲರೂ ಸ್ಥಳೀಯರೇ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಬಳಕೆಯಾಗುವ ಟ್ರ್ಯಾಕ್ಟರ್, ಟಿಪ್ಪರ್, ಜೆಸಿಬಿ ಯಂತ್ರಗಳು ಒಳಗೊಂಡಂತೆ ಯಂತ್ರೋಪಕರಣಗಳು ಸ್ಥಳೀಯರದ್ದೇ ಪಡೆಯಲಾಗಿದೆ. ಸಣ್ಣಪುಟ್ಟ ಕೆಲಸಗಾರರು ಕೂಡ ಸ್ಥಳೀಯರನ್ನೇ ನೇಮಿಸಲಾಗಿದೆ. ಮುಂದಿನ ದಿನಗಳಲ್ಲಿಯೂ ಸ್ಥಳೀಯರಿಗೆ ಆದ್ಯತೆ ನೀಡುವಂತೆ ತಿಳಿಸಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪವರ್ ಗ್ರಿಡ್ ಕಾರ್ಪೋರೇಷನ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ಗಣೇಶ ಮಾತನಾಡಿದರು. ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಅನೀಲ ಬಿರಾದಾರ, ಮಾಧವ ಮಾಳಕಾರಿ, ಪ್ರಹ್ಲಾದ ಚಿಮ್ಮೇಗಾಂವ, ಧನಾಜಿ ರಾಠೋಡ ಸೇರಿದಂತೆ ಪವರ್ ಗ್ರಿಡ್ ಉಪ ಕೇಂದ್ರದ ಅಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ಕ್ರಿಕೆಟ್ :ಚಾಂಪಿಯನ್ ಟ್ರೋಫಿ ಗೆದ್ದು ಬೀಗಿದ ಬೆಳಗಾವಿಯ ಭರತೇಶ ತಂಡ

ಬಾಗಲಕೋಟೆ,ಜೂ.06-
ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪ ಥಿಕ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ ರಾಜ್ಯ ಮಟ್ಟದ ಅಂತರ ಹೋಮಿಯೋಪಥಿಕ್ ಕಾಲೇಜುಗಳ ಡಾ.ಹಾನಿಮನ್ ಟ್ರೋಫಿಯ ಅತ್ಯಂತ ತುರುಸಿನಿಂದ ಕೂಡಿದ್ದ ಅಂತಿಮ ಪಂದ್ಯದಲ್ಲಿ ಬೆಳಗಾವಿಯ ಶಿವ ಬಸವ ಜ್ಯೋತಿ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ತಂಡವನ್ನು ಮಣಿಸಿ ಬೆಳಗಾವಿಯ ಭರತೇಶ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ತಂಡ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಅಂತಿಮ ಆಟ ಗೆದ್ದು ಚಾಂಪಿಯನ್ ಟ್ರೋಪಿ ಪಡೆದುಕೊಂಡ ಬೆಳಗಾವಿಯ ಭರತೇಶ ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯ ತಂಡಕ್ಕೆ ತಿಮ್ಮಣ್ಣ ಮೀರಕರ ಹಿರಿಯ ಮ್ಯಾನೇಜರ ಉಜ್ಜೀವನ ಫೈನಾನ್ಸ್ ಕಾರ್ಪೋರೆಶನ್ 25.000 ರೂಪಾಯಿ ನಗದು ಬಹುಮಾನ ನೀಡಿದರು.

ತೀವ್ರ ಹಣಾಹಣಿ - ತುರುಸಿನ ಸ್ಪರ್ದೆ ನೀಡಿ ರನ್ನರ ಆಫ್ ಟ್ರೋಫಿ ಪಡೆದ ಬೆಳಗಾವಿಯ ಶಿವ ಬಸವ ಜ್ಯೋತಿ ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯ ತಂಡಕ್ಕೆ ಪ್ರಾಚಾರ್ಯ ಡಾ. ಅರುಣ ಹೂಲಿ 15.000 ರೂಪಾಯಿ ನೀಡಿ ಅಭಿನಂದಿಸಿದರು.

ಪಂದ್ಯ ಗೆದ್ದ ತಂಡಗಳಿಗೆ ಟ್ರೋಫಿ ನೀಡಿ ಮಾತನಾಡಿದ ಬವಿವಿ ಸಂಘದ ಆಟೋಮೋಬೈಲ ವಿಭಾ ಗದ ಅಶೋಕ ಕರಡಿ ಅವರು ಕ್ರೀಡಾ ಕ್ಷೇತ್ರವು ಇಚ್ಛಾಶಕ್ತಿ, ಏಕಾಗ್ರತೆ ಹಾಗೂ ಸ್ಪರ್ಧಾ ಮನೋಭಾವ ಬೆಳೆಸುತ್ತದೆ. ಟೂರ್ನಾಮೆಂಟ ಯಶ ಸ್ವಿಯಾಗಲು ಸಹಾಯ ಸಹಕಾರ ನೀಡಿದ ಶರಣಪ್ಪಾ ಅಮರಣ್ಣವರ, ಗಂಗಾಬಾಯಿ ಅಮರಣ್ಣವರ ದಂಪ ತಿಗಳನ್ನು , ಸಂಪತ್ತ ದಾರಕ, ಪಂಕಜ ಕಾಸುಂಡೆ ಹಾಗೂ ಕೋಟೆನಾಡು ಸಾಮಾಜಿಕ ಮಾಧ್ಯಮದ ಪ್ರಜ್ವಲ ಸಣ್ಣಕ್ಕಿ, ರಾಯಲ್ ಬಾಗಲಕೋ ಟೆಯ ಸಾಮಾಜಿಕ ಮಾಧ್ಯಮದ ಪ್ರಜ್ವಲ ಇಳಿಗೇರ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಮಾರಂಭದಲ್ಲಿ ಕ್ರೀಡಾ ಸಂ ಯೋಜಕರುಗಳಾದ ಡಾ. ಮಂಜು ನಾಥ ಪಾಟೀಲ. ಡಾ.ಪ್ರದೀ ಪ .ಡಾ.ದೀಪಕ. ಡಾ.ಲಕ್ಷ್ಮಿ. ಡಾ. ವಿನೋದ. ಅಮರೇಶ ಬಳ ಗಾನೂರ.ಡಾ. ಅಖಿಲಾ ಹುಲ್ಲೂರ ಇದ್ದರು.

ಪರಿಸರ ಸಂರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಲಿ



ಬಾಗಲಕೋಟೆ,ಜೂ.06-
ಪರಿಸರ ನಮ್ಮ ಜೀವನದ ಆಧಾರವಾಗಿದ್ದು, ಅದನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಾಸ್ಟರ ಆರ್.ಕೆ.ಜಿ.ಎಂ.ಎಂ ಮಹಾಸ್ವಾಮೀಜಿ ಹೇಳಿದರು.

ನವನಗರ ಸೆಕ್ಟರ ನಂ.70 ರಲ್ಲಿರುವ ಬಾಗಲಕೋಟೆ ಪಟ್ಟಣ ಅಭಿವೃದ್ದಿ ಪ್ರಾಧಿಕಾರದ ಉದ್ಯಾನವನದಲ್ಲಿ ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಪ್ರಾದೇಶಿಕ ಹಾಗೂ ಅರಣ್ಯ ಇಲಾಖೆ, ಆದರ್ಶ ವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಉದ್ಯಾನವನದಲ್ಲಿ ಗಿಡ ನೆಟ್ಟು ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿಯಲ್ಲಿ ನಮ್ಮ ಕಣ್ಣಿಕೆ ಕಾಣುವ ನೆಲ, ಜಲ, ಪ್ರಾಣಿ, ಪಕ್ಷಿ. ಗಿಡ, ಮರಗಳು ಪರಿಸರದ ಅಂಗಗಳಾಗಿವೆ. ಗಿಡಮರಗಳಿಂದ ನಮಗೆ ಆಮ್ಲಜನಿಕ ಲಭ್ಯವಾಗುತ್ತಿದ್ದು, ನಾವು ಪರಿಸರವನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಪ್ರಕೃತಿಯಲ್ಲಿ ಸಿಗುವ ಸಂಪನ್ಮೂಲಗಳನ್ನು ಮಿತವಾಗಿ ಬಳಸುವ ಮೂಲಕ ಪರಿಸರ ಸಂರಕ್ಷಿಸಿಕೊಂಡು ಮುನ್ನಡೆಯಬೇಕಿದೆ. ಇದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ಪ್ಲಾಸ್ಟಿಕ್ ಮಾಲಿನ್ಯದಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕಿದೆ ಎಂದರು. ನಾವು ಭವಿಷ್ಯದ ಜನಾಂಗಕ್ಕೆ ಏನಾದರೂ ಒಳ್ಳೇಯದನ್ನು ಬಿಟ್ಟು ಹೋಗಬೇಕಿದ್ದರೆ ಅದರು ಉತ್ತಮ ಪರಿಸರ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ ಬಾಗಲಕೋಟೆ ಜಿಲ್ಲೆಯಲ್ಲಿ 80 ಸಾವಿರ ಹೆಕ್ಟೇರನಷ್ಟು ಅರಣ್ಯ ಪ್ರದೇಶವಿದ್ದು, ಈ ಪೈಕಿ ಶೇ.21 ರಷ್ಟು ಅರಣ್ಯವಿದೆ. ಆದರೆ ಅದು ಶೇ.31 ರಷ್ಟು ಇತರಬೇಕಿತ್ತು. ಇನ್ನು ಶೇ.10 ರಷ್ಟು ಪರಿಸರ ಬೆಳೆಸಬೇಕಾದರೆ ಒಂದು ಕೋಟಿ ಗಿಡಗಳನ್ನು ಬೆಳೆಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಅರಣ್ಯ ಇಲಾಖೆ ಸಹಯೋಗದೊಂದಿಗೆ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಮನೋಹರ ಅಹೀರೆ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು ಅರಣ್ಯ ವೃದ್ದಿ ಹಾಗೂ ಜೀವ ವೈವಿಧ್ಯ ಸಂರಕ್ಷಣೆಗೆ ಸಾರ್ವಜನಿಕರ ಸಹಭಾಗಿತ್ವ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ಕನಿಷ್ಟ ಒಂದು ಸಸಿ ನೆಟ್ಟು ಅದರ ಪೋಷಣೆ ಮಾಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳು ಮನೆ ಹಾಗೂ ಶಾಲೆಗಳಲ್ಲಿ ಒಂದೊಂದು ಗಿಡ ನೆಡುವ ಸಂಕಲ್ಪ ಮಾಡಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್.ಗೊರವರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಸಿ.ಮನ್ನಿಕೇರಿ, ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಗದ್ದಿ, ಬಿಟಿಡಿಎ ಮುಖ್ಯ ಅಭಿಯಂತರ ಚಂದ್ರಹಾಸ್, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಬಿ.ವಿ.ಪಾಟೀಲ, ತಹಶೀಲ್ದಾರ ವಾಸುದೇವ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನಾಚರಣೆ:ಪರಿಸರ ಉಳಿಸಿದರೆ ಸುಸ್ಥಿರ ಜೀವನ



ಹೊಸಪೇಟೆ,ಜೂ 6-
ಪರಿಸರ ಸಂರಕ್ಷಣೆ ಎಂದರೆ ಕೇವಲ ಸಸಿ ನೆಡುವುದಲ್ಲ, ಅದೊಂದು ಜೀವನಶೈಲಿ. ಇಂದು ಉತ್ತಮ ಪರಿಸರ ಉಳಿಸಿದರೆ ಮಾತ್ರ ಆರೋಗ್ಯಕರ ಸುಸ್ಥಿರ ಸಮಾಜ ಕಟ್ಟಲು ಸಾಧ್ಯ ಎಂದು ಬಲ್ಡೋಟ ಸಮೂಹದ ಸಮಾಜಸೇವಾ ವಿಭಾಗದ ಉಪಾಧ್ಯಕ್ಷ ಹೆಚ್.ಕೆ. ರಮೇಶ್ ಅಭಿಪ್ರಾಯಪಟ್ಟರು.

ನಗರದ ಟಿಬಿ ಡ್ಯಾಂ ಪದವಿಪೂರ್ವ ಕಾಲೇಜಿನ ಆವರಣದಲ್ಲಿ, ಬಲ್ಡೋಟ ಸಮೂಹದ ಎಂ.ಎಸ್.ಪಿ. ಎಲ್ ಲಿಮಿಟೆಡ್, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಮತ್ತು ಸ್ಥಳೀಯ ನಗರಸಭೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ , ಬಲ್ಡೋಟ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ 30 ಸಾವಿರ ಗಿಡ ನೆಟ್ಟಿದ್ದು, ಅದರಂತೆ ಈವರೆಗೆ ಸುಮಾರು 20 ಲಕ್ಷದ 50 ಸಾವಿರಕ್ಕೂ ಅಧಿಕ ಸಸಿಗಳನ್ನು ನೆಟ್ಟು ಪೋಷಿಸಿದ್ದೇವೆ. ಇದರಂತೆ ಪ್ರತಿಯೊಬ್ಬರೂ ಪರಿಸರದ ಬಗ್ಗೆ ಕಾಳಜಿ ವಹಿಸಿದರೆ ಮಾತ್ರ ಮುಂದಿನ ಪೀಳಿಗೆಗೆ ಸುಸ್ಥಿರ ಭವಿಷ್ಯವನ್ನು ನೀಡಲು ಸಾಧ್ಯ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಪರಿಸರವಾದಿ ಪ್ರಭಾರ್ಕ,ರ ಬಲ್ಡೋಟ ಸಮೂಹವು ಹೊಸಪೇಟೆ ನಗರವನ್ನು ಹಸಿರೀಕರಣಗೊಳಿಸುವಲ್ಲಿ ವಹಿಸುತ್ತಿರುವ ಪಾತ್ರ ಶ್ಲಾಘನೀಯ. ಸಂಸ್ಥೆ ನೆಟ್ಟ ಸಸಿಗಳು ಇಂದು ನಗರದ ಪಾಲಿಗೆ ದಟ್ಟ ಅರಣ್ಯದಂತೆ ರಕ್ಷಣೆ ನೀಡುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಪ್ರಧಾನ ಕಾರ್ಯದರ್ಶಿ ರೇಖಾ ಪ್ರಕಾಶ್ ಮಾತನಾಡಿ, ವಿದ್ಯಾರ್ಥಿಗಳು ಬದಲಾವಣೆಯ ರೂವಾರಿಗಳು. ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಸಸಿಯನ್ನು ದತ್ತು ಪಡೆದು, ಅದು ಮರವಾಗಿ ಬೆಳೆಯುವವರೆಗೆ ಪೋಷಿಸುವ ಸಂಕಲ್ಪ ಮಾಡಬೇಕು ಎಂದು ಮಾಡಿದರು.

ಕಾರ್ಯಕ್ರಮದಲ್ಲಿ ಅಶ್ವಿನ್ ಕುಮಾರ್ (ಜನರಲ್ ಮ್ಯಾನೇಜರ್ - ಸಿಎಸ್‌ಆರ್), ಮುಖ್ಯೋಪಾಧ್ಯಾಯ ವಿಜಯಭಾಸ್ಕರ್ ಹಾಗೂ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಉಮಾಪತಿ, ನಗರಸಭೆ ಸದಸ್ಯ ಜಿ.ಎಸ್. ಹನುಮಂತಪ್ಪ, ಬಲ್ಡೋಟ ಸಮೂಹದ ವೇಣು ಮಡಿಚರ್ಲಾ, ನರೇಂದ್ರ, ಸಂಜನಾ ಪಾಠಕ್, ಅನ್ನಪೂರ್ಣ ಸದಾಶಿವ, ರೆಡ್ ಕ್ರಾಸ್ ಪದಾಧಿಕಾರಿಗಳು, ಎಂ.ಎಸ್.ಪಿ.ಎಲ್ ಸಿಬ್ಬಂದಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಬಿ.ಎಂ. ನಾಗರಾಜ್ ಸ್ವಾಗತಿಸಿದರು, ಕು. ಮೋನಿಕಾ ಪ್ರಾರ್ಥಿಸಿದರು, ಶಿಕ್ಷಕಿ ನಳಿನಾ ಕಾರ್ಯಕ್ರಮ ನಿರೂಪಿಸಿದರು ಮತ್ತು ಶಿಕ್ಷಕಿ ದೀಪಾ ವಂದಿಸಿದರು.



ಜಮೀರ್ ಖಾನ್‌ಗೆ ಸಚಿವ ಸ್ಥಾನಕ್ಕೆ ಒತ್ತಾಯಿಸಿ ಮುಸ್ಲಿಂ ಸಮುದಾಯದಿಂದ ಪ್ರತಿಭಟನೆ

ಹೊಸಪೇಟೆ.ಜೂ6-
ಮಾಜಿ ಸಚಿವ ಹಾಗೂ ಶಾಸಕ ಬಿ.ಜೆಡ್.ಜಮೀರ್ ಅಹಮದ್ ಖಾನ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ, ನಗರದಲ್ಲಿ ಮುಸ್ಲಿಂ ಸಮುದಾಯದಿಂದ ಪ್ರತಿಭಟನೆ ನಡೆಸಿದರು.

ನಗರದ ಡಾ.ಪುನೀತ್ ರಾಜ್ ಕುಮಾರ್ ವೃತ್ತದಲ್ಲಿ ಮುಸ್ಲಿಂ ಬಾಂಧವರು ಹೊಸಪೇಟೆ ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಮೊಹಮದ್ ಇಮಾಮ್ ನಿಯಾಜಿ ನೇತೃತ್ವದಲ್ಲಿ ಜಮೀರ್ ಅಹಮದ್ ಖಾನ್ ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ರಸ್ತೆತಡೆ ಮಾಡಿ, ತಮ್ಮ ಆಕ್ರೋಶ ವ್ಯಕ್ತಪಡಿಸಿದರು


ಈ ಸಂದರ್ಭದಲ್ಲಿ ಮಾತನಾಡಿದ ಹುಡಾ ಅಧ್ಯಕ್ಷ ಹೆಚ್.ಎನ್.ಮೊಹಮದ್ ಇಮಾಮ್ ನಿಯಾಜಿ, ರಾಜ್ಯದ ಮುಸ್ಲಿಂ ಸಮುದಾಯದ ಮುಖಂಡರಾದ ಜಮೀರ್ ಅಹಮದ್ ಖಾನ್ ಪಕ್ಷದ ಶಿಸ್ತಿನ ಸಿಪಾಯಿ ಆಗಿದ್ದಾರೆ. ಪಕ್ಷ ಸಂಘಟನೆ, ಚುನಾವಣೆ ಸೇರಿದಂತೆ ತಮಗೆ ವಹಿಸಿದ ಪಕ್ಷದ ಎಲ್ಲಾ ಕೆಲಸಗಳನ್ನು ಉತ್ತಮವಾಗಿ ನಿಭಾಯಿಸಿ ಸಮರ್ಥ ನಾಯಕ ಎನಿಸಿ ಕೊಂಡಿದ್ದಾರೆ. ಎಲ್ಲಾ ಸಮಾಜದ ಬಡವರಿಗೂ ಆರ್ಥಿಕ ನೆರವು ನೀಡುವ ಮೂಲಕ ಎಲ್ಲಾ ಸಮಾಜದ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಈ ಹಿನ್ನಲೆಯಲ್ಲಿ ಜಮೀರ್ ಅಹಮದ್ ಅವರಿಗೆ ಸಚಿವ ಸ್ಥಾನ ನೀಡುವ ಜೊತೆಗೆ ಉಪಮುಖ್ಯ ಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಜಮೀರ್ ಅಹ ಮದ್ ಅವರಿಗೆ ಸಚಿವ ಸ್ಥಾನ ನೀಡದೆ ಹೋದರೆ ಅದು ಕಾಂಗ್ರೆಸ್ ಪಕ್ಷಕ್ಕೆ ನಷ್ಟವನ್ನುಂಟು ಮಾಡಲಿದೆ. ಈ ದೃಷ್ಟಿ ಯಿಂದ ಎರಡನೇ ಹಂತದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ಹೈಕಮಾಂಡನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಸ್ಲಿಂ ಸಮುದಾಯದ ಮುಖಂಡರಾದ ಫಿರೋಜ್, ಎಂ.ಎಂ.ಗೌಸ್, ಕೊತ್ವಾಲ್ ಮೋಸಿನ್, ಡಾ.ದರ್ವೆಶ್, ಅನ್ವರ್ ಬಾಷ, ಆಯತ್ ರಸೂಲ್, ದಾದಾ ಪೀ,ರ್ ಎನ್.ಎಸ್.ರಫೀಕ್, ಸೈಯದ್ ಬುಡೇನ್, ಜಾವೀದ್ ಹುಸೇನ್, ನಾಸೀರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಮುಂಗಾರು ಕೃಷಿಗೆ ಜಿಲ್ಲೆ ಸಜ್ಜು: 4.12 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ

ಜಿಲ್ಲೆಯಲ್ಲಿ ಬೀಜ ರಸಗೊಬ್ಬರಗಳ ಕೊರತೆ ಇಲ್ಲ - ದೇವಿಕ



ಬೀದರ್,ಜೂ.06-
ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಬೀದರ್ ಜಿಲ್ಲೆ ಸಂಪೂರ್ಣ ಸಜ್ಜಾಗಿದ್ದು, 2026ನೇ ಸಾಲಿನಲ್ಲಿ ಒಟ್ಟು 4.12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆಸುವ ಗುರಿ ಹೊಂದಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಆರ್. ಅವರು ಹೇಳಿದರು. ನಗರದ ಜಂಟಿ ಕೃಷಿ ನಿರ್ದೇ ಶಕರ ಕಚೇರಿಯಲ್ಲಿ ಶುಕ್ರವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ದಾಸ್ತಾನು ಲಭ್ಯ ಇದೆ ಮಾಹಿತಿ ನೀಡಿದರು.

ಜಿಲ್ಲೆಯ ಎಲ್ಲಾ ರಸಗೊಬ್ಬರ ಮಾರಾಟಗಾರರು ಜಿಲ್ಲೆಯ ಪಾಲಿನ ರಸಗೊಬ್ಬರವನ್ನು ಬೇರೆ ಜಿಲ್ಲೆಗಳಿಗೆ ಮಾರಾಟ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಅಂತರ ರಾಜ್ಯ ಗಡಿ ಪ್ರದೇಶಗಳಲ್ಲಿ ಚೆಕ್‌ಪೋಸ್ಟ್‌ಗಳ ಮೂಲಕ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಾಗಾಣಿಕೆಗೆ ನಿಗಾ ವಹಿಸಲಾಗುತ್ತಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಮಧ್ಯಪ್ರಾಚ್ಯದಲ್ಲಿನ ಪ್ರಸ್ತುತ ಬಿಕ್ಕಟ್ಟಿನ ಪರಿಣಾಮ ರಸಗೊಬ್ಬರ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ ರೈತರು ಅನಗತ್ಯ ಆತಂಕಕ್ಕೆ ಒಳಗಾಗದೇ ಅಗತ್ಯಕ್ಕಿಂತ ಹೆಚ್ಚು ರಸಗೊಬ್ಬರ ಖರೀದಿಸಬಾರದು ಎಂದು ಕೃಷಿ ಇಲಾಖೆ ಮನವಿ ಮಾಡಿದೆ. ರೈತರು ಕೇವಲ ಡಿಎಪಿ ಗೊಬ್ಬರದ ಮೇಲೆಯೇ ಅವಲಂಬಿತರಾಗದೇ, 20:20:0:13, 12:32:16, 15:15:15 ಸೇರಿದಂತೆ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಪರ್ಯಾಯವಾಗಿ ಬಳಸುವಂತೆ ಸಲಹೆ ನೀಡಿದರು. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ 838 ಮಿ.ಮೀ. ಇದ್ದು, ಮುಂಗಾರು ಹಂಗಾಮಿನ ವಾಡಿಕೆ ಮಳೆ 650 ಮಿ.ಮೀ. ಆಗಿದೆ. ಪೂರ್ವ ಮುಂಗಾರು ಅವಧಿಯಲ್ಲಿ 60 ಮಿ.ಮೀ. ವಾಡಿಕೆ ಮಳೆಯ 77.90 ಮಿ.ಮೀ. ಮಳೆಯಾಗಿದ್ದು, ಇದು ವಾಡಿಕೆಗಿಂತ ಶೇ.31ರಷ್ಟು ಹೆಚ್ಚಾಗಿದೆ.

ಮುಂಗಾರು ಹಂಗಾಮಿಗಾಗಿ ಜಿಲ್ಲೆಗೆ 1,04,339.70 ಕ್ವಿಂಟಲ್ ಬಿತ್ತನೆ ಬೀಜಗಳ ಹಂಚಿಕೆ ಮಾಡಲಾಗಿದೆ. ಇದರಲ್ಲಿ 1,03,165.51 ಕ್ವಿಂಟಲ್ ಸೋಯಾಅವರೆ, 951.92 ಕ್ವಿಂಟಲ್ ತೊಗರಿ, 101.09 ಕ್ವಿಂಟಲ್ ಹೆಸರು ಹಾಗೂ 87.70 ಕ್ವಿಂಟಲ್ ಉದ್ದು ಬೀಜಗಳಿವೆ. ಜಿಲ್ಲೆಯಲ್ಲಿ 30 ರೈತ ಸಂಪರ್ಕ ಕೇಂದ್ರಗಳು ಹಾಗೂ 127 ಹೆಚ್ಚುವರಿ ವಿತರಣಾ ಕೇಂದ್ರ ಗಳ ಮೂಲಕ ರೈತರಿಗೆ ರಿಯಾಯಿತಿ ದರದಲ್ಲಿ ಬೀಜ ವಿತರಣೆ ನಡೆಯು ತ್ತಿದ್ದು, ಇದುವರೆಗೆ ಸುಮಾರು 37,800 ಕ್ವಿಂಟಲ್ ಬೀಜಗಳನ್ನು ವಿತರಿಸಲಾಗಿದೆ.

ಜಿಲ್ಲೆಗೆ ಮುಂಗಾರು ಹಂಗಾಮಿನಲ್ಲಿ ಒಟ್ಟು 43,366 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದ್ದು, ಜೂನ್ ಅಂತ್ಯದ ವೇಳೆಗೆ 21,559 ಮೆಟ್ರಿಕ್ ಟನ್ ಅಗತ್ಯವಿದೆ. ಇದಕ್ಕೆ ಎದುರಾಗಿ ಜೂನ್ 2ರ ವೇಳೆಗೆ 24,065 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದ್ದು, 8,212 ಮೆಟ್ರಿಕ್ ಟನ್ ವಿತರಣೆಗೊಂಡ ನಂತರವೂ 17,485 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದೆ.

ಜಿಲ್ಲೆಯ ಚಿಲ್ಲರೆ ಮತ್ತು ಸಗಟು ಮಾರಾಟಗಾರರ ಬಳಿ ಒಟ್ಟು 13,303 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಇದೆ. ಇದರಲ್ಲಿ 4,537 ಮೆಟ್ರಿಕ್ ಟನ್ ಯೂರಿಯಾ, 2,360 ಮೆಟ್ರಿಕ್ ಟನ್ ಡಿಎಪಿ, 5,005 ಮೆಟ್ರಿಕ್ ಟನ್ ಎನ್‌ಪಿ ಕೆಎಸ್, 708 ಮೆಟ್ರಿಕ್ ಟನ್ ಎಂಒಪಿ ಹಾಗೂ 697 ಮೆಟ್ರಿಕ್ ಟನ್ ಎಸ್‌ಎಸ್‌ಪಿ ರಸಗೊಬ್ಬರಗಳಿವೆ.


ಜಿಲ್ಲೆಯ 189 ಪ್ಯಾಕ್ಸ್ ಗಳ ಪೈಕಿ 165 ಪ್ಯಾಕ್ಸ್ ಗಳು ರಸಗೊಬ್ಬರ ಮಾರಾಟ ಪರವಾನಗಿ ಹೊಂದಿದ್ದು, ಕಾಪು ದಾಸ್ತಾನು ಯೋಜನೆಯಡಿ 900.25 ಮೆಟ್ರಿಕ್ ಟನ್ ಡಿಎಪಿ, 589 ಮೆಟ್ರಿಕ್ ಟನ್ ಯೂರಿಯಾ ಹಾಗೂ ವಿವಿಧ ಸಂಯುಕ್ತ ರಸಗೊಬ್ಬರಗಳನ್ನು ಪೂರೈಸಲಾಗಿದೆ.

ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನ ಆಚರಣೆ

ಕಲಬುರಗಿ,ಜೂ.07-
-ಪ್ರತಿಯೊಂದು ಜೀವಕುಲಕ್ಕೂ ಪರಿಸರ ಅತ್ಯಗತ್ಯ. ಆದ್ದರಿಂದ ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ಬೆಳೆಸಿ, ಊರಿಗೊಂದು ವನ ಸೃಷ್ಟಿ ಮಾಡಬೇಕು ಎಂದು ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಾದ ರಾಕೇಶ್ ಕಾಂಬಳೆ ಅವರು ಹೇಳಿದರು.

ಶುಕ್ರವಾರ ನಗರದ ಕೇಂದ್ರ ಕಾರಾಗೃಹದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿ ಕಾರಾಗೃಹದ ಹೊರ ಹಾಗೂ ಒಳ ಆವರಣದಲ್ಲಿ ಅಧಿಕಾರಿಗಳು, ಸಿಬ್ಬಂದಿ ವರ್ಗ ಮತ್ತು ಕಾರಾಗೃಹದ ಬಂದಿಗಳು ಒಟ್ಟಾಗಿ ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಮಾಡಿದರು.

ಅವರು ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ವಿಶ್ವ ಸಂಸ್ಥೆಯು 1972 ರಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲು ನಿರ್ಧರಿಸಿತು. ಅದರಂತೆ 1974 ರಲ್ಲಿ ಮೊದಲ ಬಾರಿಗೆ 100 ಕ್ಕೂ ಹೆಚ್ಚು ದೇಶಗಳಲ್ಲಿ ಪರಿಸರ ದಿನವನ್ನು ಆಚರಿಸಲಾಯಿತು. ಅಂದಿನಿಂದ ಇಂದಿನವರೆಗೆ ಪ್ರತಿ ವರ್ಷ ಹೊಸ ಥೀಮ್‌ನೊಂದಿಗೆ ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದ ಒಳ ಮತ್ತು ಹೊರ ಆವರಣದಲ್ಲಿ ವಿವಿಧ ತಳಿಯ 100 ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು.

ಒಂದನೇಯ ಪುಟದಿಂದ

ರಾಜ್ಯ ಬಿಜೆಪಿಯಲ್ಲಿ ಮತ್ತೆ ನಾಯಕತ್ವ ಚರ್ಚೆ, ಕುತೂಹಲ ಮೂಡಿಸಿದ ಹೈಕಮಾಂಡ್ ನಡೆ

ಕಾಪಾಡಿಕೊಳ್ಳುವುದು ಹೈಕಮಾಂಡ್‌ಗೆ ಸವಾಲಾಗಿ ಪರಿಣಮಿಸುತ್ತದೆ. ರಾಜ್ಯಮಟ್ಟದ ಬದಲಾವಣೆಗಳ ಕುರಿತು ದೆಹಲಿಯ ಮಟ್ಟದಲ್ಲಿ ನಿರ್ಧಾರಗಳು ವಿಳಂಬವಾದಾಗ, ಕೆಳಮಟ್ಟದ ಕಾರ್ಯಕರ್ತರಲ್ಲಿ ಸಹಜವಾಗಿ ಗೊಂದಲಗಳು ಉಂಟಾಗುತ್ತವೆ. ವಿಶೇಷವಾಗಿ ಪಕ್ಷದ ಸಂಘಟನಾತ್ಮಕ ಚುನಾವಣೆಗಳು ಮತ್ತು ವೀಕ್ಷಕರ ನೇಮಕದಂತಹ ವಿಷಯಗಳಲ್ಲಿ ಸ್ಪಷ್ಟತೆ ಇಲ್ಲದಿರುವುದು ಅಸಮಾಧಾನಕ್ಕೆ ಕಾರಣವಾಗಿತ್ತು. ಆದರೆ, ಪ್ರಸ್ತುತ ವಿಜಯೇಂದ್ರ ಅವರ ನಾಯಕತ್ವವನ್ನು ಹೈಕಮಾಂಡ್ ಬಲಪಡಿಸಿರುವುದರಿಂದ, ಕಾರ್ಯಕರ್ತರು ಸಂಘಟನಾತ್ಮಕ ಕೆಲಸಗಳತ್ತ ಗಮನಹರಿಸುವಂತೆ ಸೂಚನೆ ನೀಡಲಾಗಿದೆ. ಸದ್ಯಕ್ಕೆ ಪಕ್ಷದ ವರಿಷ್ಠರು ವಿಜಯೇಂದ್ರ ಅವರ ನಾಯಕತ್ವದಲ್ಲಿ ಮುಂದಿನ ಚುನಾವಣೆಗಳು ಮತ್ತು ರಾಜಕೀಯ ಸವಾಲುಗಳನ್ನು ಎದುರಿಸಲು ನಿರ್ಧರಿಸಿದ್ದಾರೆ. ಯಥಾಸ್ಥಿತಿ: ಕಳೆದ ಕೆಲವು ತಿಂಗಳುಗಳಿಂದ ಪಕ್ಷದೊಳಗಿನ ನಾಯಕರ ಭಿನ್ನಾಭಿಪ್ರಾಯ ಮತ್ತು ಸಂಘಟನಾತ್ಮಕ ಚರ್ಚೆಗಳು ನಡೆಯುತ್ತಿದ್ದರೂ, ಬಿಜೆಪಿ ಹೈಕಮಾಂಡ್ ಸದ್ಯದ ಮಟ್ಟಿಗೆ ಬಿ.ವೈ. ವಿಜಯೇಂದ್ರ ಅವರ ನಾಯಕತ್ವದ ಮೇಲೆ ವಿಶ್ವಾಸ ವ್ಯಕ್ತಪಡಿಸಿದೆ. ಅವರ ನೇಮಕಾತಿಯ ಅವಧಿಯ ಕುರಿತಾದ ಅನಿಶ್ಚಿತತೆಗಳ ನಡುವೆಯೂ ಅವರು ಅಧ್ಯಕ್ಷ ಹುದ್ದೆಯಲ್ಲಿ ಮುಂದುವರೆಯುವ ಸಾಧ್ಯತೆ ಇದೆ.

ದೇಶದ ಜನರಲ್ಲಿ ಭಾವೈಕ್ಯತೆ ಮೂಡಿಸಿದ ಛತ್ರಪತಿ ಶಿವಾಜಿ ಮಹಾರಾಜರು. ಡಾ. ಬಿರಾದಾರ್

ಬಾಗುವರನ್ನು ಇಡೀ ಜಗತ್ತು ಗೌರವಿಸುತ್ತಿದೆ ಎಂದು ಹೇಳಿದರು .ನಾವು ವಾಸಿಸುವ ಸ್ಥಳದ ಇತಿಹಾಸ ಮತ್ತು ನಮ್ಮ ಪೂರ್ವಜರ ಇತಿಹಾಸವನ್ನು ನಾವು ತಿಳಿದಿರಬೇಕು. ನಾವು ಹುಟ್ಟಿದ ದೇಶದ ಧರ್ಮ ಅದರ ತಿರುಳನ್ನ ಪ್ರತಿಯೊಬ್ಬರು ತಿಳಿದುಕೊಂಡು ಅದರ ಉಳಿವಿಗಾಗಿ ಪ್ರತಿಯೊಬ್ಬರು ಕಾರ್ಯನಿರ್ವಹಿಸಬೇಕೆಂದು ಹೇಳಿದ್ದಾರೆ ಎಂದು ಡಾ. ಬಿರಾದಾರ ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶ್ರೀಮತಿ ಮಂಜುಳಾ ಅವಧೂತ್ ಅಧ್ಯಕ್ಷರು ಅಖಿಲ ಕರ್ನಾಟಕ ರಾಜ್ಯ ಮಹಿಳಾ ನೌಕರ ಸಂಘ ತಾಲೂಕ ಘಟಕದ ಅಧ್ಯಕ್ಷರು ಮಾತನಾಡುತ್ತಾ ನಮ್ಮ ಕ್ಷತ್ರಿಯ ಮರಾಠ ಪ್ರಸಿದ್ಧ ಧೈರ್ಯ ಶೂರ ಮತ್ತು ದೇಶಭಕ್ತ ರಾಜನೆಂದರೆ ಛತ್ರಪತಿ ಶಿವಾಜಿ ಮಹಾರಾಜರು ಅವರು ವಿಶೇಷವಾಗಿ ಸರ್ವ ಜನಾಂಗದ ಮತ್ತು ಸ್ತ್ರೀಯರ ಬಗ್ಗೆ ಅಪಾರವಾದ ಅಭಿಮಾನವನ್ನು ಗೌರವವನ್ನು ಹೊಂದಿದ್ದರು. ಜೊತೆಗೆ ತಾಯಿಯ ಬಗ್ಗೆ ಬಹಳ ಭಕ್ತಿಯನ್ನು ಗುರುವಿನ ಬಗ್ಗೆ ಅಷ್ಟೇ ದೈವಭಕ್ತಿಯನ್ನು ಹೊಂದಿದ್ದರು. ಜೂನ್ ಆರು .1674 ರಲ್ಲಿ ನಡೆದ ಅವರ ಪಟ್ಟಾಭಿಷೇಕದ ವೈಭವ ಅವರ ಆಡಳಿತದ ಸಾಧನೆ ಇತಿಹಾಸದ ಪುಟದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ. ಎಂದು ಹೇಳಿದರು .ಈ ಸಂದರ್ಭದಲ್ಲಿ ರಾಜೇಂದ್ರ ಶಿವಾಲೆ ಅಧ್ಯಕ್ಷರು ಛತ್ರಪತಿ ಶಿವಾಜಿ ಮಹಾರಾಜರು ಮೂರ್ತಿಸ್ಥಾಪನೆ ವಿಭಾಗ ಅಭಿವೃದ್ಧಿ ಸಮಿತಿ. ಸಂಧ್ಯಾ ಆರೋಗ್ಯ ಇಲಾಖೆ ರಾಯಚೂರು. ಸತೀಶ್ ಜಗತಾಪ್ ವೆಂಕಟೇಶ್ ಯಾದವ್.ಅಶೋಕ್ ಯಾದವ್. ಪೂಜಾರಾಮ ಕಠಾರೆ ಅಮಿತಾ ಜಗತಾಪ್. ಲಕ್ಷ್ಮಿ ಶಿವಾಳೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಂಗಾವತಿ: ಮನೆಯವರಿಗೆ ಚಾಕುವಿನಿಂದ ಇರಿದ ಮಗ: ಅಕ್ಕ, ತಂದೆ ಸಾವು; ತಾಯಿ ಸ್ಥಿತಿ ಗಂಭೀರ

ಕೊನೆಯುಸಿರೆಳೆದಿದ್ದಾರೆ'' ಎಂದು ಎಸ್‌ಪಿ ರಾಮ್ ಎಲ್.ಅರಸಿದ್ದಿ ಮಾಹಿತಿ ನೀಡಿದ್ದಾರೆ.

''ಗಾಯಾಳುಗಳನ್ನು ವಿಚಾರಿಸಿದಾಗ ನಾಲ್ವರೂ ಮಲಗಿದ್ದ ಸಂದರ್ಭದಲ್ಲಿ ಏಕಾಏಕಿ ಲೈಟ್ ಆಫ್ ಮಾಡಿ ಕುಟುಂಬದ ಸದಸ್ಯರಲ್ಲೇ ಒಬ್ಬರು ಚಾಕುವಿನಿಂದ ದಾಳಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಸದ್ಯ ವೆಂಕಟ ನಾಯ್ಡು ಅವರ ತಂದೆ ದೂರು ನೀಡಿದ್ದು, ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ದೂರಿನಲ್ಲಿ ಮೊಮ್ಮಗನ ಮೇಲೆ ಶಂಕೆ ವ್ಯಕ್ತಪಡಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್.ಅರಸಿದ್ದಿ ತಿಳಿಸಿದ್ದಾರೆ.

ಗ್ರಾಮ ಸ್ವರಾಜ್, ಪಂಚಾಯತ್ ರಾಜ್ ಕಾಯ್ದೆಗೆ ಬಿಡಿಗಾಸಿನ ಬೆಲೆಯನ್ನೂ ಕೊಡದ ಸರ್ಕಾರದ ನಡೆ ಖಂಡನೀಯ



ಅತಿ ಶೀಘ್ರದಲ್ಲಿ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡಬೇಕು. ಒಂದು ವೇಳೆ ವಿಳಂಬವಾದರೆ ಕಾನೂನಾತ್ಮಕ ಹೋರಾಟಕ್ಕೆ ಇಳಿಯಬೇಕಾಗುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಸರ್ಕಾರ ಬಿಡಿಗಾಸಿನ ಬೆಲೆಯನ್ನೂ ಕೊಡದೆ ಸಂವಿಧಾನ ವಿರೋಧಿ ನೀತಿಯ ಹಾದಿ ತುಳಿಯುತ್ತಿರುವುದು ಖಂಡನೀಯ. ಕಾನೂನು, ನೀತಿ-ನಿಯಮಗಳ ಚೌಕಟ್ಟಿಗೆ ನಾವು ಸಂವಿಧಾನ ಎನ್ನುತ್ತೇವೆ. ಆದರೆ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡದೇ ಕಾನೂನು, ನೀತಿ-ನಿಯಮಗಳನ್ನು ಗಾಳಿಗೆ ತೂರಿ ಮನ ಬಂದಂತೆ ವರ್ತಿಸುತ್ತಿರುವ ಸರ್ಕಾರದ ನಡೆ ಎಷ್ಟರಮಟ್ಟಿಗೆ ಸರಿ?

ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಮುಂಬರುವ ದಿನ-ಮಾನಗಳಲ್ಲಿ ಸಾಧಿಸಬೇಕಾದ ಗುರಿಗಳನ್ನು ಸ್ಥಳೀಯ ಜನ ಸಮುದಾಯದೊಂದಿಗೆ ಕಾರ್ಯರೂಪಕ್ಕೆ ತರುವುದೇ ದೂರದೃಷ್ಟಿ ಯೋಜನೆಯಾಗಿದೆ.

ಹಳ್ಳಿ, ಗ್ರಾಮ, ನಗರ ಮತ್ತು ಪಟ್ಟಣಗಳ ಅಭಿವೃದ್ಧಿ ಸ್ಥಳೀಯ ಸರ್ಕಾರದ ಉಪಸ್ಥಿತಿಯಿಂದ ಮಾತ್ರ ಸಾಧ್ಯ. ಸರ್ಕಾರ ಎಂದರೆ ಒಂದು ರೈಲು ಬೋಗಿ ಇದ್ದಂತೆ. ಅದಕ್ಕೆ ಸ್ಥಳೀಯ ಸರ್ಕಾರಗಳು ಎಂಜಿನ್ ಇದ್ದಹಾಗೆ. ಹಾಗೆಯೇ ಬೋಗಿಗಳೆಂದರೆ ವಿಧಾನ ಪರಿಷತ್ತು ಮತ್ತು ವಿಧಾನಸಭೆ ಸದಸ್ಯರುಗಳು. ಆದರೆ ಈಗ ಮರವನ್ನು ಕಡಿಯಲು ಬಳಸುವ ಕೊಡಲಿಯ ಮರದ ಭಾಗವೇ ಆ ಮರಕ್ಕೆ ಮಾರಕ ಎಂಬಂತೆ ಸ್ಥಳೀಯ ಜನ ಪ್ರತಿನಿಧಿಗಳಿಂದ ಆಯ್ಕೆಯಾದ ಶಾಸಕರು ಸ್ಥಳೀಯ ಚುನಾವಣೆಗಳ ಬಗ್ಗೆ ಚಕಾರ ಎತ್ತದೆ ಮೌನಿಗಳಾಗಿರುವುದು ಏಕೆ?

ನೂರಾರು ಹಳ್ಳಿಗಳ ಸಮಸ್ಯೆ ಪರಿಹರಿಸುವುದು ಕೇವಲ ಒಬ್ಬ ಚುನಾಯಿತ ಪ್ರತಿನಿಧಿ ಎಂಎಲ್‌ಎ ಅಥವಾ ಎಂಎಲ್‌ಸಿಗಳಿಂದ ಅಸಾಧ್ಯ. ಹಾಗೂ ಪಂಚಾಯಿತಿ ಆಡಳಿತಾಧಿಕಾರಿ ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಹತ್ತಾರು ಹಳ್ಳಿಗಳ ಸಮಸ್ಯೆ ಪರಿಹರಿಸುವುದೂ ಕಷ್ಟಸಾಧ್ಯ.

ಸ್ಥಳೀಯ ಆಡಳಿತ ಮಂಡಳಿ ಇಲ್ಲದೇ ರಾಜ್ಯಾದ್ಯಂತ ಪಂಚಾಯಿತಿಗಳ ಪರಿಸ್ಥಿತಿ ಹೇಗಾಗಿದೆ ಎಂದರೆ, ನಾವಿಕ ಇಲ್ಲದ ಹಡಗು ಎಂಬಂತಾಗಿವೆ. ಇದನ್ನರಿತು ಇತ್ತೀಚಿಗೆ ಆಡಳಿತಾರೂಢ ಪಕ್ಷದ ಪ್ರಭಾವಿ ಮಂತ್ರಿಯವರು ಕಾರ್ಯಕರ್ತರಿಂದ ಸರ್ಕಾರ, ಕಾರ್ಯಕರ್ತರಿಂದ ಅಧಿಕಾರ ಬಂದಿದೆ ಎನ್ನುತ್ತಾರೆ. ಅಂತೆಯೇ ಇನ್ನು ವಿಳಂಬ ಮಾಡದೆ ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು.

ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅತಿ ಶೀಘ್ರದಲ್ಲಿ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡಬೇಕು. ಒಂದು ವೇಳೆ ವಿಳಂಬವಾದರೆ ಕಾನೂನಾತ್ಮಕ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಈ ಮೂಲಕ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಮಹಾ ಒಕ್ಕೂಟದ ಪರವಾಗಿ ಎಚ್ಚರಿಸುತ್ತಿದ್ದೇನೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸಚಿವ ಸಂಪುಟದಲ್ಲಿ ಭೋವಿ ಜನಾಂಗ ಪ್ರಾತಿನಿಧ್ಯಕ್ಕೆ ಒತ್ತಾಯ

ಶಿವರಾಜ ತಂಗಡಗಿ ಸೇರಿ 2 ಸಚಿವ ಸ್ಥಾನ ನೀಡಲೇಬೇಕು: ಸಂತೋಷ ಭೋವಿ

ಕಲ್ಯಾಣ ಸಂಜೆ ಸುದ್ದಿ

ಸಿರವಾರ,ಜೂ.07-

ರಾಜ್ಯ ಸಚಿವ ಸಂಪುಟ ರಚನೆಯಲ್ಲಿ ಭೋವಿ ಜನಾಂಗಕ್ಕೆ ಮೊದಲ ಆದ್ಯತೆ ನೀಡದಿರುವುದು ಬೇಸರ ತಂದಿದೆ. ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಭೋವಿ ಸಮಾಜದ ಶಿವರಾಜ ತಂಗಡಗಿ ಸೇರಿ ಇಬ್ಬರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ತಾಲೂಕು ಭೋವಿ ಸಮುದಾಯದ ಅಧ್ಯಕ್ಷ ಸಂತೋಷ ಭೋವಿ ಒತ್ತಾಯಿಸಿ ದ್ದಾರೆ. ಈ ಕುರಿತು ಮಾತನಾಡಿ, ರಾಜ್ಯ ಸರಕಾರ ಜಾರಿಗೊಳಿಸಿರುವ ಪ್ರಕಾರ 5,25 (ಬಲಗೈ), 5,25 (ಎಡಗೈ) ಮತ್ತು ಶೇ.4.5 ಇತರೆ ಪ.ಜಾತಿಗಳ ಮೀಸಲಾತಿ ಪ್ರಕಾರ ನಮ್ಮ ಸಮುದಾಯಕ್ಕೆ 2 ಸಚಿವ ಸ್ಥಾನ ಅಗತ್ಯವಾಗಿ ನೀಡಬೇಕಾಗಿದೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ಶಿವರಾಜ ತಂಗಡಗಿ, ಪಕ್ಷನಿಷ್ಠೆ ಹೊಂದಿದವರಾಗಿದ್ದು, ಇಲಾಖೆಯಲ್ಲಿ ಮಾಡಿರುವ ಇತಿಹಾಸವಿದೆ. ಕನ್ನಡ ನಾಡು-ನುಡಿ ಜನಪರ ಆಡಳಿತ

ಸೇವೆಗಾಗಿ ನಿರಂತರ ಕಾರ್ಯಕ್ರಮಗಳ ಮೂಲಕ ರಾಜ್ಯದಲ್ಲಿ ಉತ್ತಮ ಸೇವೆ ಮಾಡಿದ್ದಾರೆ. ಶಿವರಾಜ ತಂಗಡಗಿಯವರ ಪಕ್ಷ ನಿಷ್ಠೆಯ ಜೊತೆಗೆ, ಪಕ್ಷ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕತೆಯಿಂದ ಮಾಡಿದ್ದಾರೆ. ಬಳ್ಳಾರಿ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ತಮ್ಮ ಆರೋಗ್ಯ ಸ್ಥಿತಿ ಸರಿಯಾಗಿರ ದಿದ್ದರೂ ಕೂಡ, ಚುನಾವಣಾ ಪ್ರಚಾರಕ್ಕೈಗೊಂಡು ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಪುಲಿಕೇಶಿನಗರ ಕ್ಷೇತ್ರದಿಂದ ಶಾಸಕ ಕೆ.ಸಿ.ಶ್ರೀನಿ ವಾಸ ಮತ್ತು ಪಾವಗಡ ಕ್ಷೇತ್ರ ದಿಂದ ಶಾಸಕ ವೆಂಕಟೇಶ ಭೋವಿ ಸಮುದಾಯವರಾಗಿದ್ದು, ಸೂಕ್ತ ಅವಕಾಶಗಳನ್ನು ನೀಡಬೇಕಾಗಿದೆ. ನಿಗಮ-ಮಂಡಳಿಯಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರಮೇಶಭೋವಿ, ರಂಗನಾಥ ಭೋವಿ,ರಾಜಭೋವಿ, ಭೀಮೇಶ್ ಭೋವಿ, ಯಂಕಪ್ಪ ಭೋವಿ, ಆಂಜಿನೇಯ್ಯ ಭೋವಿ, ಇದ್ದರು.



ಅ. ಕ. ವಾಲ್ಮೀಕಿ ನಾಯಕ ಮಹಾ ಸಮಿತಿ ತಾಲೂಕು ಅಧ್ಯಕ್ಷರಾಗಿ ಮಂಜುನಾಥ ಮರಾಠ ಆಯ್ಕೆ

ಕಲ್ಯಾಣ ಸಂಜೆ ಸುದ್ದಿ

ಸಿರವಾರ.ಜೂ.07-

ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಮಿತಿ (ರಿ)ಬೆಂಗಳೂರು ರಾಜ್ಯಾಧ್ಯಕ್ಷರಾದ ರವಿಚಂದ್ರ ನಾಯಕ ಹಾಗೂ ರಾಜ್ಯ ಕಾರ್ಯಾಧ್ಯಕ್ಷರಾದ ಮಂಜುನಾಥ ನಾಯಕ ಪಾವಗಡ, ಜಿಲ್ಲಾದ್ಯಕ್ಷರಾದ ರವಿ ನಾಯಕ ಮಾಕಾಪುರ ಜಿಲ್ಲಾ ಕಾರ್ಯಾಧ್ಯಕ್ಷರಾದ ಶಿವರಾಯ ನಾಯಕ ಯಮುನಾಳ, ಶಿಫಾರಸ್ಸಿನ ಮೆರೆಗೆ ಮೆರೆಗೆ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾ ಸಮಿತಿ (ರಿ) ಸಿರವಾರ ತಾಲೂಕು ಅಧ್ಯಕ್ಷರಾಗಿ ಮಂಜುನಾಥ್ ಮರಾಠ ಇವರನ್ನು ಜಿಲ್ಲಾ ಸಮಿತಿ ವತಿಯಿಂದ ಆಯ್ಕೆ ಮಾಡಲಾಗಿದೆ. ಆಯ್ಕೆಯಾಗಿರುವುದಕ್ಕೆ ಸಮಾಜದಿಂದ ಸನ್ಮಾನಿಸಿ ಅಭಿನಂದಿಸಲಾಯಿತು.


ಮನೆಯಿಂದಲೇ ಕಸ ವಿಂಗಡಿಸಿ ನೀಡಿ ಸ್ವಚ್ಛತೆ ಕಾಪಾಡಲು ಸಾಧ್ಯ ಮಾರ್ಕಪ್ಪ

ಸಿರವಾರ.ಜೂ.7-

ಮನೆಗಳಲ್ಲಿ ಸಂಗ್ರಹವಾಗಿ ಹಸಿ,ಒಣ ಕಸವನ್ನು ವಿಂಗಡಣೆ ಮಾಡಿ ಪೌರಕಾರ್ಮಿಕರು, ವಾಹನ ಆಗಮಿಸಿದಾಗ ವಾರ್ಡಿನ ನಿವಾಸಿಗಳು ನೀಡಿದರೆ ಸ್ವಚ್ಛತೆಗೆ ಆದ್ಯತೆ ನೀಡಲು ಸಹಕಾರಿಯಾಗುವುದು ಎಂದು ಪ.ಪಂಚಾಯತಿ ವಾರ್ಡ ನಂ 8- ಸದಸ್ಯ ಮಾರ್ಕಪ್ಪ ಹೇಳಿದರು. ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಾರ್ಡ ನಂ. 8 ಕಾಲೋನಿ (ಯಂಕಣ್ಣ ಗಡ್ಡೆ ಕ್ಯಾಂಪ್) ಸಾರ್ವಜನಿಕರಿಗೆ ರೂಲ್ಸ್ 2026 ರ ಆದೇಶದಂತೆ



ಮೂಲದಿದಲೇ 4 ಹಂತದಲ್ಲಿ ಕಸವನ್ನು ವಿಂಗಡಣೆ ಮಾಡಿ ಪಟ್ಟಣ ಪಂಚಾಯತಿಯ ಸ್ವಚ್ಛತಾ ವಾಹನ ಗಳಿಗೆ ನೀಡಬೇಕೆಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಆರೋಗ್ಯ ಸಹಾಯಕಿ ಸುನೀತಾ ಸಜ್ಜನ್, ಉಮೇಶ ಸೇರಿದಂತೆ ಇನ್ನಿತರು ಇದರು.



ಯಾದಗಿರಿ:ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವ ಡಿ.ಕೆ ಶಿವಕುಮಾರ್ ರವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ಡಾ.ಎಸ್.ಬಿ.ಕಾಮರೆಡ್ಡಿ ಅವರು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು

ವಿವಿಧ ವಾರ್ಡ್ ಗಳಲ್ಲಿ ಜನ ಸ್ಪಂದನ ಕಾರ್ಯಕ್ರಮಕ್ಕೆ ಆಹ್ವಾನ

ಬೀದರ ಜೂ,07-

ಬೀದರ ಮಹಾನಗರ ಪಾಲಿಕೆಯ ವಾರ್ಡ್ 9, 15, 16 35 ವಾರ್ಡಗಳಲ್ಲಿ 2026ರ ಜೂನ್ 8, 9 ರಂದು ಬೆಳಿಗ್ಗೆ 10 ಗಂಟೆಗೆ ಜನ ಸ್ಪಂದನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬೀದರ ಮಹಾನಗರ ಪಾಲಿಕೆ ಆಯುಕ್ತರು ಅವರು ತಿಳಿಸಿದ್ದಾರೆ.

ಬೀದರ ವಾರ್ಡ್ ನಂ.9 ರಲ್ಲಿ 2026ರ ಜೂನ್ 8 ರಂದು ಬೆಳಿಗ್ಗೆ 10 ಗಂಟೆಗೆ ಮುಲ್ತಾನ್ ಪಾಶ ದರ್ಗಾದಲ್ಲಿ ಜನ ಸ್ಪಂದನ ಕಾರ್ಯಕ್ರಮ ನಡೆಯಲಿದೆ.

ವಾರ್ಡ್ ನಂ. 35 ರಲ್ಲಿ 2026ರ ಜೂನ್ 8 ರಂದು ಮಧ್ಯಾಹ್ನ 1.30 ಗಂಟೆಗೆ ಮಂಗಲ್ ಪೇಟ್ ಚರ್ಚ್ ನಡೆಯಲಿದೆ. ವಾರ್ಡ್ ನಂ. 15, 16 ರಲ್ಲಿ 2026ರ ಜೂನ್ 9 ರಂದು ಬೆಳಿಗ್ಗೆ 10 ಗಂಟೆಗೆ ಪ್ರತಾಪ್ ನಗರ ಛಲವಾದಿ ಭವನದಲ್ಲಿ ನಡೆಯಲಿದೆ.

ಬೀದರ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ ಸಂಖ್ಯೆ 09, 15, 16 35ಗಳಲ್ಲಿ ಸಾರ್ವಜನಿಕ ಸಮಸ್ಯೆಗಳು, ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ಹಾಗೂ ಜನಾಭಿಪ್ರಾಯ ಸಂಗ್ರಹಿಸುವ ಉದ್ದೇಶದಿಂದ ಜನ ಸ್ಪಂದನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಂದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜನ ಸ್ಪಂದನ ಕಾರ್ಯಕ್ರಮದ ಸದುಪಯೋಗ ಪಡೆಯಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರು ವರ್ಷ ನನ್ನ ಬೆಳೆಸಿ ನೂರು ವರ್ಷ ನಿಮ್ಮನ್ನು ಉಳಿಸುವೆ : ನ್ಯಾಯಾಧೀಶ ಕುಲ್ಕರ್ಣಿ

ಬೀದರ್,ಜೂ.06-

ಗಿಡವೊಂದು ಮನುಷ್ಯನಿಗೆ ಸದಾ ಹೀಗೆ ಹೇಳುತ್ತದೆ, ಮೂರು ವರ್ಷ ನನ್ನನ್ನು ಬೆಳೆಸು ನಾನು ನಿನ್ನನ್ನು ನೂರು ವರ್ಷ ಬೆಳೆಸುತ್ತೇನೆ. ನಾವೆಲ್ಲರೂ ಒಂದೊಂದು ಮರವನ್ನ 3 ವರ್ಷ ನೋಡಿಕೊಂಡರೆ ಅದು ನಮ್ಮನ್ನು ನೂರು ವರ್ಷದವರೆಗೆ ಕಾಪಾಡುವುದಲ್ಲದೆ ಶುದ್ಧ ಗಾಳಿಯನ್ನು ನೀಡುತ್ತದೆ ಎಂದು ಬಸವ ಕಲ್ಯಾಣ ಪ್ರಿನ್ಸಿಪಲ್ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಹನುಮಂತ ರಾವ್ ಕುಲಕರ್ಣಿ ಎಂದು ಹೇಳಿದರು.



ಬಸವಕಲ್ಯಾಣ ತಾಲೂಕಿನ ಜವಾಹರ್ ನವೋದಯ ವಿದ್ಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕ ವಕೀಲರ ಸಂಘ ಬಸವಕಲ್ಯಾಣ, ವಲಯ ಅರಣ್ಯ ಅಧಿಕಾರಿಗಳ ಕಾರ್ಯಾಲಯ ಬಸವಕಲ್ಯಾಣ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಗಿಡವೊಂದನ್ನು ನೆಟ್ಟು ಮಕ್ಕಳಿಗೆ ಈ ಮೇಲಿನಂತೆ ತಿಳಿಸಿದರು.

ಮುಂದುವರೆದ ಮಾತನಾಡುತ್ತಾ ಅವರು ವಿಶ್ವ ಪರಿಸರ ದಿನಾಚರಣೆಯು 1972 ರಿಂದ ವಿಶ್ವಸಂಸ್ಥೆಯು ಒಂದು ನಿರ್ಧಾರವನ್ನು ಪ್ರಕಟಿಸಿ ಇನ್ನು ಮುಂದೆ ಜೂನ್ 5 ರಂದು ವಿಶ್ವ ಪರಿಸರ ದಿನಾಚ ರಣೆಯನ್ನಾಗಿ ಆಚರಿಸಬೇಕು. ಮರಗಳನ್ನು ಬೆಳೆಸಿ ಸುಸ್ಥಿರ ಅಭಿವೃದ್ಧಿಯನ್ನು ಕಾಪಾಡಬೇಕು ಎಂಬ ಉದ್ದೇಶದಿಂದ ವಿಶ್ವ ಪರಿಸರ ದಿನಾಚರಣೆ ಆರಂಭಗೊಂಡಿತು ಎಂದು ಸವಿಸ್ತಾರವಾಗಿ ಮಕ್ಕಳಿಗೆ ತಿಳಿಹೇಳಿದರು. ಇನ್ನೋರ್ವ ಅತಿಥಿಗಳಾದ ಗೌರವಾನ್ವಿತ ನ್ಯಾಯಾಧೀಶರು ಜ್ಞಾನೇಶ್ವರ ವಿಠಲ್ ಮಾಳಗಿ ಮಾತ ನಾಡಿ, ಪ್ರತಿಯೊಬ್ಬ ಮಕ್ಕಳು ತಮ್ಮ ತಮ್ಮ ಹೆಸರಿನಲ್ಲಿ ಗಿಡವನ್ನು ನೆಟ್ಟು ಕಾಪಾಡಿ, ಪರಿಸರಕ್ಕೆ ಬಹುದೊಡ್ಡ ಕೊಡುಗೆಯನ್ನು ಕೊಡಬೇಕೆಂದು ಕರೆಕೊಟ್ಟರು.

ಬಾಲಾಜಿ ಆದೆಪ್ಪ ಸರ್ಕಾರಿ ಅಭಿಯೋಜಕರು ಬಸವಕಲ್ಯಾಣ ಇವರು ಮಾತನಾಡುತ್ತಾ ಪರಿಸರ ಕಾಳಜಿಯನ್ನು ಪ್ರತಿಯೊಬ್ಬರು ಹೊಂದಿರಬೇಕು ಎಂಬ ಕಿವಿಮಾತು ವಿದ್ಯಾರ್ಥಿಗಳಿಗೆ ಹೇಳಿದರು.

ಪ್ರೇಮ್ ಶೇಖರ್ ವಲಯ ಅರಣ್ಯ ಅಧಿಕಾರಿಗಳು ಸಾಮಾಜಿಕ ವಲಯ ಬಸವಕಲ್ಯಾಣ ಇವರು ಮಾತನಾಡಿ ವಿಶ್ವದಲ್ಲಿ ಅರಣ್ಯ ನಾಶವಾಗುತ್ತಿದೆ ಪರಿಸರ ಹಾಳಾಗುತ್ತಿದೆ ಪ್ರತಿಯೊಬ್ಬ ವ್ಯಕ್ತಿ ಕೈಜೋಡಿಸಿದರೆ ಅದರ ಸಂರಕ್ಷಣೆ ಸಾಧ್ಯವಿದೆ. ಪ್ರತಿ ವರ್ಷ ಪರಿಸರ ಸಂರಕ್ಷಣೆಯ ಘನೋದ್ದೇಶವನ್ನು ಗಿಡ ನೆಡುವುದರ ಮೂಲಕ ಅದನ್ನು ನೆರವೇರಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು. ಅಧ್ಯಕ್ಷತೆ ವಹಿಸಿರತಕ್ಕಂಥ ವಿದ್ಯಾಲಯದ ಪ್ರಾಚಾರ್ಯರಾದ ನಾಗರಾಜನ್ ಪರಿಸರ ಸಂರಕ್ಷಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಹಿರಿಯ ನ್ಯಾಯಾಧೀಶರು ಪ್ರಾಚಾರ್ಯರಿಗೆ ಸಸಿ ಒಂದನ್ನು ವಿತರಿಸುವದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಬಂದಿರುವ ಎಲ್ಲಾ ತಿಥಿಗಳಿಗೆ ನ್ಯಾಯಾಧೀಶರು ಒಂದೊಂದು ಸಸಿ ನೀಡಿ ಇದನ್ನು ಬೆಳೆಸುವಂತೆ ಕರೆ ಕೊಟ್ಟರು.

ಶಿವಕುಮಾರ್ ವಲಯ ಅರಣ್ಯ ಇಲಾಖೆ ಬಸವಕಲ್ಯಾಣ ಇವರುಗಳ ವಿಶೇಷ ಕಾಳಜಿ ವಹಿಸಿ ವಿದ್ಯಾಲಯಕ್ಕೆ ಉಚಿತವಾಗಿ ಸಸಿಗಳನ್ನು ವಿತರಿಸುವು ದಲ್ಲದೆ, ತಮ್ಮ ಸಿಬ್ಬಂದಿಯೊಡನೆ ವಿದ್ಯಾಲಯಕ್ಕೆ ಬಂದು ತಾವೇ ಸ್ವತಃ ಗಿಡ ನೆಡುವ ವ್ಯವಸ್ಥೆಯನ್ನು ನೋಡಿಕೊಂಡರು.

ಕಾರ್ಯಕ್ರಮದಲ್ಲಿ ರೇಣುಕಾ ಮಠಪತಿ ಉಪಾಧ್ಯಕ್ಷರು ವಕೀಲರ ಸಂಘ, ಜಗದೇವಿ ಚೊಂಡೆ ಸಹಾಯಕ ಅಭಿಯೋಜಕರು ಬಸವ ಕಲ್ಯಾಣ ಪ್ರೇಮ್ ಶೇಖರ್ ವಲಯ ಅರಣ್ಯ ಅಧಿಕಾರಿಗಳು ಸಾಮಾಜಿಕ ವಲಯ ಬಸವಕಲ್ಯಾಣ. ವಿದ್ಯಾಲಯದ ಉಪನ್ಯಾಸಕರಾದ, ಲಕ್ಷ್ಮಿಕಾಂತ್ ದುದ್ದಣಗಿ, ಕೆ.ರಾಜೇಶಂ, ಪಿ.ಡಿ.ಶಹಾ, ಮದನ್ ಲಾಮತುರೆ, ಬಾಲಾಜಿ, ಅಲ್ಕಾದೇವಿ, ಸತೀಶ್ ಕುಮಾರ್ ಸ್ವಾಮಿ, ಮುಂತಾದವರು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ೯ ಲಕ್ಷ್ಮೀಕಾಂತ ಮಾಡಿ ದರೆ ನಿರೂಪಣೆ ಧರ್ಮಣ್ಣ ಚಿಟ್ಟಾ, ಮದನ್ ಲಾಮತುರೆ ವಂದಿಸಿದರು.

ಪರಿಸರ ಉಳಿಸಲು ಗಿಡಗಳನ್ನು ದತ್ತು ಪಡೆಯಿರಿ: ರಂಗಾಯಣ ನಿರ್ದೇಶಕಿ ಡಾ. ಸುಜಾತಾ ಜಂಗಮಶೆಟ್ಟಿ

ಕಲಬುರಗಿ, ಜೂ.07-

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಕೇವಲ ಗಿಡಗಳನ್ನು ನೆಡುವುದಷ್ಟೇ ನಮ್ಮ ಜವಾಬ್ದಾರಿಯಲ್ಲ, ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರ ಪರಿಸರ ಪ್ರೇಮವನ್ನು ನಾವೆಲ್ಲರೂ ಮಾದರಿಯಾಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಛಯದ ಆವರಣದಲ್ಲಿ ನೆಡಲಾದ ಗಿಡಗಳು ಹಾನಿಯಾಗದಂತೆ ರಕ್ಷಿಸಲು ಇಲ್ಲಿನ ಸಿಬ್ಬಂದಿಗಳು ಗಿಡಗಳನ್ನು ದತ್ತು ಪಡೆದು ಪೋಷಿಸಬೇಕು ಎಂದು ಕಲಬುರಗಿ ರಂಗಾಯಣದ ನಿರ್ದೇಶಕರಾದ ಡಾ. ಸುಜಾತಾ ಜಂಗಮಶೆಟ್ಟಿ ಅವರು ಹೇಳಿದರು.



ಜಿಲ್ಲಾಡಳಿತ, ಪ್ರಾದೇಶಿಕ ಅರಣ್ಯ ವಿಭಾಗ, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಹಾಗೂ ಕರ್ನಾಟಕ ರಂಗಾಯಣ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಡಾ. ಸಿದ್ದಯ್ಯ ಪುರಾಣಿಕ ಸುವರ್ಣ ಸಾಂಸ್ಕೃತಿಕ ಸಮುಚ್ಛಯದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಟ್ಟು, ಪೂಜೆ ಸಲ್ಲಿಸಿ ಅವರು ಮಾತನಾಡಿ, ಪರಿಸರ ದಿನದ ಅಂಗವಾಗಿ ಸಮುಚ್ಚಯದ ಆವರಣಕ್ಕೆ ಒಟ್ಟು 200 ಗಿಡಗಳನ್ನು ನೀಡಿ, ಅದರಲ್ಲಿ 50 ಗಿಡಗಳನ್ನು ಕಾರ್ಯಕ್ರಮದ ಅಂಗವಾಗಿ ನೆಡಲಾಯಿತು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಸವರಾಜ ಡಾಂಗೆ ಅವರು ಮಾತನಾಡಿ, ರಂಗಾಯಣದ ನಿರ್ದೇಶಕರು ಸೂಚಿಸಿದಂತೆ ಸಿಬ್ಬಂದಿಗಳು ಗಿಡಗಳನ್ನು ದತ್ತು ಪಡೆಯುವುದು ಅತ್ಯಂತ ಉತ್ತಮ ಆಲೋಚನೆಯಾಗಿದೆ. ಪ್ರತಿದಿನ ಊಟ ಮಾಡಿದ ನಂತರ ಗಿಡಗಳ ಬಳಿಯೇ ಕೈ ತೊಳೆದುಕೊಂಡರೆ ನೀರು ವ್ಯರ್ಥವಾಗುವುದಿಲ್ಲ ಮತ್ತು ಗಿಡಗಳಿಗೂ ನಿರಂತರ ನೀರು ಸಿಗುತ್ತದೆ. ಪ್ರತಿಯೊಬ್ಬರೂ ತಮ್ಮ ಹುಟ್ಟುಹಬ್ಬದ ಸವಿನೆನಪಿಗೆ ಒಂದೊಂದು ಗಿಡ ನೆಟ್ಟರೆ, ಆ ಗಿಡಗಳು ನಮ್ಮ 60-70 ವರ್ಷಗಳ ಆಯಸ್ಸಿನವರೆಗೂ ನಮಗೆ ಉತ್ತಮ ಪರಿಸರ ನೀಡುತ್ತವೆ ಎಂದು ತಿಳಿಸಿದರು. ರಂಗಾಯಣದ ಆಡಳಿತಾಧಿಕಾರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ರಂಗಾಯಣದ ಕಲಾವಿದರು ಪರಿಸರ ಜಾಗೃತಿ ಮೂಡಿಸುವ ಪರಿಸರ ಗೀತೆಗಳನ್ನು ಹಾಡಿದರು. ಈ ಸಂದರ್ಭದಲ್ಲಿ ಉಪವಲಯ ಅರಣ್ಯಾಧಿಕಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಯಾರದೊಡ್ಡಿ ಸರ್ಕಾರಿ ಶಾಲೆಯ ದುಸ್ಥಿತಿ: ಗ್ರಾಮಸ್ಥರ ಆಕ್ರೋಶ

ಮಸ್ಕಿ,ಜೂ.07- ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಯಾರದೊಡ್ಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮೂಲಭೂತ ಸೌಲಭ್ಯಗಳ ಕೊರತೆಯಿಂದ ತೀವ್ರ ದುಸ್ಥಿತಿಗೆ ತಲುಪಿದ್ದು, ಶಾಲೆಯಲ್ಲಿನ ನೂರಾರು ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕೆಂದು ಗ್ರಾಮಸ್ಥರು ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಆಗ್ರಹಿಸಿದ್ದಾರೆ.

ಶಾಲೆಯಲ್ಲಿ ಸರ್ಕಾರಿ ಶಿಕ್ಷಕರೇ ಇಲ್ಲದಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಆತಂಕಕ್ಕೆ ಒಳಗಾಗಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) ನೀಡುವ ವ್ಯವಸ್ಥೆಯೂ ಸಮರ್ಪಕವಾಗಿಲ್ಲ ಎಂದು ಪಾಲಕರು ದೂರಿದ್ದಾರೆ.

ಶಾಲೆಯ ಕೊಠಡಿಗಳು ಶಿಥಿಲಾವಸ್ಥೆಯಲ್ಲಿದ್ದು, ವಿದ್ಯಾರ್ಥಿಗಳ ಸುರಕ್ಷತೆಗೆ ಧಕ್ಕೆ ಉಂಟಾಗುವ ಭೀತಿ ಎದುರಾಗಿದೆ. ಕುಡಿಯುವ ನೀರು ಹಾಗೂ ಬಳಕೆಯ ನೀರಿನ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿ ಗಳು ದಿನನಿತ್ಯ ಸಂಕಷ್ಟ ಅನುಭವಿಸುತ್ತಿದ್ದಾರೆ. ಶಾಲೆಯಲ್ಲಿ ವಿದ್ಯುತ್ ಸಂಪರ್ಕ, ಫ್ಯಾನ್ ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆಯೂ ಇದೆ. ಶೌಚಾಲಯ ಇಲ್ಲದ ಕಾರಣ ವಿದ್ಯಾರ್ಥಿಗಳು ಬಯಲು ಬಹಿರ್ದೆಸೆಗೆ ತೆರಳಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದು, ವಿಶೇಷವಾಗಿ ಬಾಲಕಿಯರಿಗೆ ತೊಂದರೆ ಉಂಟಾಗಿದೆ. ಶಾಲೆಗೆ ಕಾಂಪೌಂಡ್ ಗೋಡೆ ಇಲ್ಲದಿರುವುದರಿಂದ ಭದ್ರತಾ ಸಮಸ್ಯೆಯೂ ಎದುರಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಪಾಲಕರು, ಗ್ರಾಮದ ಯುವಕರು ಹಾಗೂ ಗುರುಹಿರಿಯರು ಗರುಡ ನ್ಯೂಸ್ ಮಾಧ್ಯಮ ತಂಡದ ಮೂಲಕ ತಮ್ಮ ಅಳಲನ್ನು ವ್ಯಕ್ತಪಡಿಸಿದ್ದು, ಶಾಲೆಯ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕೆಂದು ಸರ್ಕಾರ, ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಮಾಡಿದ್ದಾರೆ. ಗ್ರಾಮಸ್ಥರ ಪ್ರಕಾರ, ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕಾದರೆ ಶಿಕ್ಷಕರ ನೇಮಕಾತಿ ಸೇರಿದಂತೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಸುರಕ್ಷಿತ ಕಟ್ಟಡ ಹಾಗೂ ಕಾಂಪೌಂಡ್ ವ್ಯವಸ್ಥೆಗಳನ್ನು ತುರ್ತು ಆಧಾರದ ಮೇಲೆ ಕಲ್ಪಿಸಬೇಕು. ಸಂಬಂಧಿಸಿದ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ದತ್ತಾತ್ರೇಯ ಪಾಟೀಲ್ ರೇವೂರ ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ಒತ್ತಾಯ



ಯಾದಗಿರಿ,ಜೂ.07- ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ದಾಖಲಿಸಲಾಗಿರುವ ಎಫ್‌ಐರ್ಆ ಅನ್ನು ರದ್ದುಪಡಿಸಬೇಕು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೋಮುವಾದ ಮತ್ತು ಜಾತಿ ವೈಷಮ್ಯಕ್ಕೆ ಪ್ರಚೋದನೆ ನೀಡುತ್ತಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಯುವ ಮುಖಂಡ ಶಿವುಕುಮಾರ್ ಪಾಟೀಲ್ ನಂದೆಪಲ್ಲಿ ಮನವಿ ಮಾಡಿದ್ದಾರೆ.ಈ ಕುರಿತು ನಗರ ಪೊಲೀಸ್ ಆಯುಕ್ತರಿಗೆ ಸಲ್ಲಿಸಿರುವ ಮನವಿಯಲ್ಲಿ, ಆಳಂದದಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರು ಮಾಜಿ ಸಚಿವ ಖಮರುಲ್ ಇಸ್ಲಾಂ ಅವರು 2004 ರಲ್ಲಿ ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದ್ದು ಯಾವುದೇ ಜಾತಿ ಅಥವಾ ಧರ್ಮದ ಹೆಸರನ್ನು ಪ್ರಸ್ತಾಪಿಸಿಲ್ಲ ಎಂದು ತಿಳಿಸಲಾಗಿದೆ.ಜಾಲತಾಣಗಳಲ್ಲಿ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿ ಅವಹೇಳನ ಮಾಡುತ್ತಿದ್ದು ಜಾತಿ-ಜಾತಿಗಳ ನಡುವೆ ದ್ವೇಷ ಮತ್ತು ಪ್ರಚೋದನೆ ಮೂಡಿಸುವ ಪ್ರಯತ್ನ ನಡೆಸುತ್ತಿದ್ದಾರೆ ಎಂದರು.ಸಾಮಾಜಿಕ ಜಾಲತಾಣಗಳ ಮೂಲಕ ಸಮಾಜದಲ್ಲಿ ಕದನ ಮತ್ತು ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿರುವವರ ವಿರುದ್ಧ ಐಪಿಸಿ ಸೆಕ್ಷನ್ 153ಎ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಜೊತೆಗೆ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ದಾಖಲಿಸಿರುವ ಎಫ್‌ಐರ್ಆ ಅನ್ನು ಹಿಂದಕ್ಕೆ ಪಡೆಯಬೇಕು ಎಂದು ಬಿಜೆಪಿ ಯುವ ಮುಖಂಡ ಶಿವುಕುಮಾರ್ ಪಾಟೀಲ್ ನಂದೆಪಲ್ಲಿ ಒತ್ತಾಯಿಸಿದ್ದಾರೆ

ಮಾಜಿ ಜಿಲ್ಲಾ ಪಂ. ಅಧ್ಯಕ್ಷ ರಾಜಾ ಹನುಪ್ಪನಾಯಕ ತಾತಾರವರ ಜನ್ಮದಿನ ಅಂಗವಾಗಿ ವಿಶೇಷ ಪೂಜೆ



ಸುರಪುರ,ಜೂ.07- ಸುರಪುರ ಪಟ್ಟಣದ ನಿವಾಸಿಯಾದ ಯಾದಗಿರಿ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ರಾಜಾ ಹನುಪ್ಪನಾಯಕ ತಾತಾ ಧಣಿಯವರ ಜನ್ಮದಿನದ ಅಂಗವಾಗಿ ದೇವರ ಗೋನಾಲ ಗ್ರಾಮದ ಕ್ಷೇತ್ರಾಧಿದೇವರಾದ ಶ್ರೀ ಹೈಯ್ಯಾಳಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಅರ್ಚನೆ ನೆರವೇರಿಸಿ ಅವರ ಆಯುಷ್ಯ ಆರೋಗ್ಯ, ಸುಖ-ಶಾಂತಿ ಮತ್ತು ಜನಸೇವೆಯ ನಿರಂತರ ಅವಕಾಶಕ್ಕಾಗಿ ಪ್ರಾರ್ಥಿಸಲಾಯಿತು.

ಈ ಸಂದರ್ಭದಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಮುಖಂಡರು ಹಾಗೂ ಅಭಿಮಾನಿಗಳು, ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ, ಸಿರಿ-ಸಂಪತ್ತು ಹಾಗೂ ಸಮಾಜ

ಸೇವೆಯ ಮೂಲಕ ಇನ್ನಷ್ಟು ಜನಪರ ಕಾರ್ಯಗಳನ್ನು ಕೈಗೊಳ್ಳಲು ದೇವರ ಅನುಗ್ರಹ ಸದಾ ಇರಲಿ ಎಂದು ಹಾರೈಸಿದರು.

ಸಾರ್ವಜನಿಕ ಜೀವನದಲ್ಲಿ ಜನಪರ ಚಿಂತನೆ ಹಾಗೂ ಅಭಿವೃದ್ಧಿ ಕಾರ್ಯಗಳ ಮೂಲಕ ಗುರುತಿಸಿಕೊಂಡಿರುವ ಮಾಜಿ ಜಿಲ್ಲಾ ಪಂ ಅಧ್ಯಕ್ಷ ರಾಜಾ ಹನುಪ್ಪನಾಯಕ ತಾತಾ ರವರು ವರು ಇನ್ನಷ್ಟು ಯಶಸ್ಸು ಸಾಧಿಸಿ ಜನಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಶುಭಾಶಯ ಕೋರಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ನಿಂಗಣ್ಣ ಮುತ್ತಾ, ಸಣ್ಣ ದೇಸಾಯಿ, ದೇವೇಂದ್ರಪ್ಪಗೌಡ ಮಾಲಿಪಾಟೀಲ, ನಿಂಗಪ್ಪ ನಾಯ್ಕೋಡಿ, ಲಕ್ಷ್ಮೀಕಾಂತ ಬಿರಾದರ್, ಡಾ.ಶ್ರವಣಕುಮಾರ ಕೆರಿಕೋಡಿ, ಮಾನಪ್ಪ ಶಹಾಪೂರಕರ್, ನಿಂಗಣ್ಣ ಸಗರ, ದೊಡ್ಡ ನಿಂಗಣ್ಣ ಚಿಕನಹಳ್ಳಿ, ಕೃಷ್ಣಯ್ಯ ನಾಯ್ಕೋಡಿ, ಮಾರ್ಥಂಡ ಕೊಂಡಿಕರ್, ಶಮುದ್ದೀನ್, ಮಾನಪ್ಪ ಕೆರಿಕೋಡಿ, ನಿಂಗಣ್ಣ ಕಿದರಳ್ಳಿ, ಹೊನ್ನಯ್ಯ ಕನ್ನಳ್ಳಿ, ಹಣಮಂತ ಪೂಜಾರಿ, ಬಸಲಿಂಗಪ್ಪ ಪೂಜಾರಿ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

ಬೆಂಗಳೂರು ವಿವಿಯ ವತಿಯಿಂದ ವಿಶ್ವ ಪರಿಸರ ದಿನಾಚರಣೆ

ಪರಿಸರ ಸಂರಕ್ಷಣೆಯೇ ನಮ್ಮೆಲ್ಲರ ಹೊಣೆ: ಡಾ. ರಮೇಶ್ ಕಿತ್ತೂರು ಅಭಿಮತ

ಬೆಂಗಳೂರು,ಜೂ.07- ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಿದ್ದ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮತ್ತು ಜಾಗೃತಿ ಮೂಡಿಸಲು ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಬೆಂಗಳೂರು ವಿವಿಯ ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳಾದ ಡಾ. ರಮೇಶ್ ಕಿತ್ತೂರು ಅವರು, ಪರಿಸರ ಮಾಲಿನ್ಯದ ಭೀಕರತೆ ಮತ್ತು ಅದನ್ನು ತಡೆಗಟ್ಟುವಲ್ಲಿ ಯುವಜನತೆಯ ಮಹತ್ತರ ಪಾತ್ರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಪ್ರಕೃತಿಯೇ ನಮಗೆ ಜೀವನಾಡಿ. ಆಧುನಿಕ ಜೀವನ ಶೈಲಿಯಲ್ಲಿ ನಾವು ಪ್ರಕೃತಿಯಿಂದ ದೂರವಾಗುತ್ತಿದ್ದೇವೆ. ಪರಿಸರವನ್ನು ಕೇವಲ ಒಂದು ದಿನದ ಆಚರಣೆಗೆ ಸೀಮಿತಗೊಳಿಸದೆ, ದಿನ ನಿತ್ಯದ ಜೀವನದಲ್ಲಿ ಮರ-ಗಿಡಗಳನ್ನು ಬೆಳೆಸುವ, ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವ, ಜಲ ಸಂರಕ್ಷಣೆಯ ಸಂಕಲ್ಪವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತೊಡಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ವಿಜಯನಗರ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕ-2 ಕಾರ್ಯಕ್ರಮಾಧಿಕಾರಿ ಪ್ರೊ. ಬಿ.ಎಂ. ರತ್ನಕುಮಾರಿ ಅವರು ಸಸ್ಯಶಾಸ್ತ್ರದ ವಿದ್ಯಾರ್ಥಿಗಳಾಗಿ ನಾವು ಸಸ್ಯಗಳಿಗೂ ಮನುಷ್ಯರಿಗೂ ಇರುವ ಅವಿನಾಭಾವ ಸಂಬಂಧವನ್ನು ಅರಿತಿದ್ದೇವೆ ಎಂದು ತಿಳಿಸಿದರು. ಪ್ರಸ್ತುತ ದಿನದಲ್ಲಿ ಸಸ್ಯಗಳು ಕೇವಲ ಭೂಮಿಯ ಅಲಂಕಾರವಲ್ಲ, ಅವು ಪ್ರತಿಯೊಂದು ಜೀವಿಗೂ ಉಸಿರು ನೀಡುವ ಜೀವನಾಡಿಗಳು. ನಾವು ನೆಡುವ ಪ್ರತಿಯೊಂದು ಸಸಿಯೂ ನಾಳೆಯ ಜಗತ್ತಿನ ಸಮತೋಲನವನ್ನು ಕಾಪಾಡುವ ಒಂದು ಸಣ್ಣ ಹೆಜ್ಜೆಯಾಗಿದೆ. ಇಂದು ನಾವು ಕೇವಲ ಒಂದು ಗಿಡವನ್ನು ನೆಡುತ್ತಿಲ್ಲ, ಬದಲಾಗಿ ಭವಿಷ್ಯದ ಸುಸ್ಥಿರತೆಯನ್ನು ಬಿತ್ತುತ್ತಿದ್ದೇವೆ. ಎಂದು ಪರಿಸರ ಸಂರಕ್ಷಣೆಯ ಕುರಿತು ಅರ್ಥಪೂರ್ಣವಾಗಿ ತಿಳಿಸಿದರು.

ಇದೇ ವೇಳೆಯಲ್ಲಿ ಬೆಂವಿವಿಯ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ರಮೇಶ್ ಕಿತ್ತೂರು, ಬೆಂಗಳೂರು ವಿವಿಯ ಉಪ ಕುಲಸಚಿವ ಸುರೇಶ್ ಖರ್ಗೆ, ವಿಜಯನಗರ ಪ್ರಥಮ ದರ್ಜೆ ಕಾಲೇಜಿನ ಪ್ರೊ. ಬಿ.ಎಂ. ರತ್ನಕುಮಾರಿ, ಎವಿಸ್ಸಿ ಪದವಿ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರೊ. ವಿಶ್ವಾರಾಧ್ಯ, ಚಂದ್ರಪ್ಪ ಎಂ. ಮಿಡ್ಲುಮುನಿ, ಬೆಂಗಳೂರು ವಿವಿಯ ವಿದ್ಯಾರ್ಥಿ ಒಕ್ಕೂಟದ ಗೌರವಾಧ್ಯಕ್ಷ ಶೇಷಾದ್ರಿ ಜಿ.ಸಿ, ಅತಿಥಿ ಉಪನ್ಯಾಸಕ ಡಾ. ಅನಂತಕೃಷ್ಣಸ್ವಾಮಿ ಡಿ.ಎಸ್, ರವಿಕುಮಾರ್, ಭೂಮಿಕಾ, ನಂದಿತಾ, ಲೇಖನ ಸೇರಿದಂತೆ ಎನ್‌ಎಸ್‌ಎಸ್ ಘಟಕದ ಸ್ವಯಂ ಸೇವಕರು, ವಿದ್ಯಾರ್ಥಿಗಳು ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತಿತರರು ಭಾಗವಹಿಸಿದ್ದರು.

ಯುವ ಜನರು ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಮುಂದಿನ ಪೀಳಿಗೆಗೆ ಸುಸ್ಥಿರ ಭೂಮಿಯನ್ನು ಉಳಿಸಿಕೊಡಬೇಕಾದ ವಿವಿಯ ಆವರಣದಲ್ಲಿ ಇಂತಹ ಪರಿಸರ ಸ್ನೇಹಿ ಅಭಿಯಾನಗಳನ್ನು ನಿರಂತರವಾಗಿ ಕೈಗೊಳ್ಳಲಾಗುವುದು.

- ಡಾ. ರಮೇಶ್ ಕಿತ್ತೂರು, ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳು

ಪ್ರತಿಯೊಂದು ಸಸಿಯೂ ತನ್ನದೇ ಆದ ವಿಶಿಷ್ಟ ಪರಿಸರ ವ್ಯವಸ್ಥೆಯನ್ನು ಹೊಂದಿದ್ದು, ಅದನ್ನು ಪೋಷಿಸುವುದು ನಮ್ಮೆಲ್ಲರ ಜವಾಬ್ದಾರಿ. ಗಿಡ ನೆಡುವುದು ಕೇವಲ ಕೃಷಿಯಲ್ಲ, ಅದು ಪ್ರಕೃತಿಯ ಮೇಲಿನ ನಮ್ಮ ಗೌರವದ ಸಂಕೇತವಾಗಿದೆ. - ಪ್ರೊ. ಬಿ.ಎಂ. ರತ್ನಕುಮಾರಿ, ಎನ್‌ಎಸ್‌ಎಸ್ ಘಟಕ-2 ಕಾರ್ಯ ಕ್ರಮಾಧಿಕಾರಿ, ವಿಜಯನಗರ ಪ್ರಥಮ ದರ್ಜೆ ಕಾಲೇಜು

ಸಸ್ಯಗಳು ದ್ಯುತಿ ಸಂಶ್ಲೇಷಣೆಯ ಮೂಲಕ ನಮಗೆ ಆಮ್ಲಜನಕವನ್ನು ಉಚಿತವಾಗಿ ನೀಡುತ್ತವೆ. ಆದರೆ ಪ್ರತಿಯಾಗಿ ನಾವು ಅವುಗಳಿಗೆ ಕೊಡುವ ರಕ್ಷಣೆ ಅತ್ಯಲ್ಪ. ಅರಣ್ಯ ನಾಶ ಮತ್ತು ನಗರೀಕರಣದಿಂದ ನಾವು ನಿಸರ್ಗದೊಂದಿಗೆ ಕಳೆದುಕೊಂಡಿರುವ ಸಂಪರ್ಕವನ್ನು ಮರುಸ್ಥಾಪಿಸುವುದು ನಮ್ಮ ಆದ್ಯತೆಯಾಗಬೇಕು.

ರೋಡಲಬಂಡ ಪಂಚಾಯಿತಿಯಲ್ಲಿ ಆಡಳಿತದ ಹಳಿ ತಪ್ಪಿದ ಬಂಡಿ: 15 ದಿನಗಳಿಂದ ಹನಿ ನೀರಿಲ್ಲದೆ ದಲಿತರ ಓಣಿ ತತ್ತರ

ಇನ್‌ಚಾರ್ಜ್ ನೆಪ ಹೇಳಿ ಜಾರಿಕೊಳ್ಳುವ ಪಿಡಿಒ ರಾಮಣ್ಣ ವಿರುದ್ಧ ಮಹಿಳೆಯರ ಉಗ್ರ ಧರಣಿ



ಹಟ್ಟಿ.ಜೂ.07- ಸಮೀಪದ ರೋಡಲಬಂಡ (ತವಗ) ಗ್ರಾಮ ಪಂಚಾಯಿತಿಯಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಹಳಿ ತಪ್ಪಿದೆ. ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಮೂಲಸೌಕರ್ಯಗಳಿಲ್ಲದೆ ಸಾರ್ವಜನಿಕರು ಪರದಾಡುತ್ತಿದ್ದರೆ, ಇತ್ತ ಅಧಿಕಾರಿಗಳು ಮಾತ್ರ ಬಜೆಟ್ ಇಲ್ಲ, ದುಡ್ಡಿಲ್ಲ ಎಂಬ ಸಿದ್ಧ ಆಶ್ವಾಸನೆಗಳನ್ನೇ ಬಂಡವಾಳ ಮಾಡಿಕೊಂಡಿದ್ದಾರೆ. ಅಧಿಕಾರಿಗಳ ಈ ಬೇಜವಾಬ್ದಾರಿತನದಿಂದ ಬೇಸತ್ತ ದಲಿತ ಮುಖಂಡರು ಹಾಗೂ ನೂರಾರು ಮಹಿಳೆಯರು ಇಂದು ಗ್ರಾಮ ಪಂಚಾಯಿತಿ ಕಚೇರಿ ಎದುರು ಜಮಾಯಿಸಿ ಆಕ್ರೋಶದ ಧರಣಿ ನಡೆಸಿದರು.

ಜನಪ್ರತಿನಿಧಿಗಳ ಮಾತಿಗೂ ಇಲ್ಲ ಕವಡೆ ಕಾಸಿನ ಕಿಮ್ಮತ್ತು! ಸ್ಥಳೀಯರು ಮತ್ತು ಪಂಚಾಯಿತಿ ಸದಸ್ಯರ ಆರೋಪದ ಪ್ರಕಾರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ () ರಾಮಣ್ಣ ಅವರು ಕಳೆದ ಒಂದು ತಿಂಗಳಿಂದ ಕಚೇರಿಗೆ ಸರಿಯಾಗಿ ಬರುತ್ತಿಲ್ಲ. ವಾರದಲ್ಲಿ ಕೇವಲ ಒಂದೆರಡು ದಿನ ಮಾತ್ರ ಬಂದು ಮುಖ ತೋರಿಸಿ ಹೋಗುತ್ತಿದ್ದಾರೆ.

ಗ್ರಾಮದ ಜ್ವಲಂತ ಸಮಸ್ಯೆಗಳ ಕುರಿತು ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಪ್ರಶ್ನಿಸಿದರೆ, ಪಿಡಿಒ ರಾಮಣ್ಣ ಅವರು ನಾನು ಇಲ್ಲಿಗೆ ಕೇವಲ ಇನ್‌ಚಾರ್ಜ್ (ಪ್ರಭಾರ) ಅಷ್ಟೇ, ನನಗೇನು ಪೇಮೆಂಟ್ ಬಿಲ್ಲುಗಳು ಮಾತ್ರ ಕೇಳಬೇಡಿ ಎಂದು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ.

ಹಳ್ಳಿಗಳಲ್ಲಿ ರಸ್ತೆ, ಚರಂಡಿ ಅಥವಾ ಕುಡಿಯುವ ನೀರಿನ ಕಾಮಗಾರಿಗಳ ಬಗ್ಗೆ ಕೇಳಲು ಹೋದರೆ, ಪಂಚಾಯಿತಿಯಲ್ಲಿ ಸದ್ಯಕ್ಕೆ ದುಡ್ಡಿಲ್ಲ, ಆಮೇಲೆ ಮಾಡೋಣ ಎಂಬ ಹಸಿ ಸುಳ್ಳುಗಳನ್ನು ಹೇಳುತ್ತಿದ್ದಾರೆ. ಯಾವುದೇ ಕಾಮಗಾರಿಗಳ ಬಿಲ್ ಪಾವತಿಯಾಗದೆ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ಥಗಿತಗೊಂಡಿದ್ದು, ಪಂಚಾಯಿತಿಯಲ್ಲಿ ಶೂನ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

15 ದಿನಗಳಿಂದ ಹನಿ ನೀರಿಗೂ ಹಾಹಾಕಾರ!ರೋಡಲಬಂಡ ಗ್ರಾಮದ ದಲಿತರ ಓಣಿಯಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರಿಲ್ಲದೆ ಸಾರ್ವಜನಿಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಓಣಿಯಲ್ಲಿದ್ದ ಏಕೈಕ ಕೊಳವೆ ಬಾವಿ (ಬೋರ್‌ವೆಲ್) ಕೆಟ್ಟು ವಾರ ಕಳೆದಿದ್ದರೂ ಅದನ್ನು ದುರಸ್ತಿ ಮಾಡುವ ಕನಿಷ್ಠ ಸೌಜನ್ಯವನ್ನು ಪಂಚಾಯಿತಿ ತೋರಿಲ್ಲ. ಪರ್ಯಾಯವಾಗಿ ಟ್ಯಾಂಕರ್ ಮೂಲಕವೂ ನೀರು ಸರಬರಾಜು ಮಾಡದ ಕಾರಣ, ವೃದ್ಧರು, ಮಹಿಳೆಯರು ಹಾಗೂ ಶಾಲಾ ಮಕ್ಕಳು ಕೊಡ ಹಿಡಿದು ಮೈಲಿಗಟ್ಟಲೆ ಅಲೆಯುವಂತಾಗಿದೆ. ಪಿಡಿಒ ನಾಪತ್ತೆ: ಸಿಬ್ಬಂದಿಗಳ ಉಡಾಫೆ ಉತ್ತರಕ್ಕೆ ಜನಾಕ್ರೋಶ ನೀರಿನ ಗಂಭೀರ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತರಲು ಸಾರ್ವಜನಿಕರು ಇಂದು ಪಂಚಾಯಿತಿ ಕಚೇರಿಗೆ ಧಾವಿಸಿದ್ದರು. ಆದರೆ ಸಾರ್ವಜನಿಕರ ಅಹವಾಲು ಆಲಿಸಬೇಕಾದ ಪಿಡಿಒ ರಾಮಣ್ಣ ಹಾಗೂ ಕಾರ್ಯದರ್ಶಿ ಇಬ್ಬರೂ ಕಚೇರಿಯಲ್ಲಿ ಇರಲಿಲ್ಲ. ಈ ಕುರಿತು ಅಲ್ಲಿದ್ದ ಸಿಬ್ಬಂದಿಯನ್ನು ಪ್ರಶ್ನಿಸಿದರೆ, ಇಲ್ಲಿ ಯಾರೂ ಇಲ್ಲ, ಪಂಚಾಯಿತಿ ರಣ ರಣ ಹೊಡೆಯುತ್ತಿದೆ. ಊರಿನಲ್ಲಿ ಯಾರೂ ಹೇಳುವವರು ಕೇಳುವವರು ಇಲ್ಲ! ಎಂದು ಅತ್ಯಂತ ಉಡಾಫೆಯಿಂದ ಹುಂಬ ಉತ್ತರ ನೀಡಿದ್ದಾರೆ. ಸಿಬ್ಬಂದಿಯ ಈ ವರ್ತನೆಯಿಂದ ರೊಚ್ಚಿಗೆದ್ದ ಸಾರ್ವಜನಿಕರು ಕಚೇರಿ ಮುಂಭಾಗದಲ್ಲೇ ಧರಣಿ ಕುಳಿತು ಘೋಷಣೆಗಳನ್ನು ಕೂಗಿದರು.

ಪಂಚಾಯಿತಿ ಇರುವುದು ಜನರ ಸೇವೆಗೆ, ರಣ ರಣ ಹೊಡೆಯುವುದಕ್ಕಲ್ಲ! ನಮ್ಮ ವಾರ್ಡಿಗೆ 15 ದಿನಗಳಿಂದ ನೀರಿಲ್ಲದೆ ಜನ ತತ್ತರಿಸುತ್ತಿದ್ದಾರೆ. ಇಲ್ಲಿ ಬಂದು ಕೇಳಿದರೆ ಸಿಬ್ಬಂದಿಗಳು ಜವಾಬ್ದಾರಿಯಿಲ್ಲದೆ ಮಾತನಾಡುತ್ತಾರೆ. ಅಧಿಕಾರಿ ರಾಮಣ್ಣ ಅವರು ಇನ್‌ಚಾರ್ಜ್ ನೆಪ ಹೇಳಿ ತಿಂಗಳಿಂದ ಕೇವಲ ಆಶ್ವಾಸನೆ ನೀಡುತ್ತಿದ್ದಾರೆ. 'ಮೇಲಾಧಿಕಾರಿಗಳಿಗೆ ಹೇಳಿದ್ದೇವೆ' ಮತ್ತು 'ದುಡ್ಡಿಲ್ಲ' ಎಂಬ ಸಿದ್ಧ ಉತ್ತರದೊಂದಿಗೆ ಸದಾ ಜಾರಿಕೊಳ್ಳುತ್ತಿದ್ದಾರೆ. ಕ್ಷೀರಲಿಂಗಪ್ಪ, ದಲಿತ ಸಂಘಟನೆಯ ಪ್ರಮುಖ ಮುಖಂಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರಾದ ಮರಗಮ್ಮ, ಹುಲಗಮ್ಮ, ರಂಗಮ್ಮ ಹಾಗೂ ಮುಖಂಡರಾದ ದುರ್ಗಪ್ಪ, ಭೀಮೇಶ್ ಮುಂತಾದವರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಗ್ರಾಮ ಪಂಚಾಯಿತಿ ಕಚೇರಿ ಇರುವುದು ಜನರ ಸೇವೆ ಮಾಡಲು, ರಣ ರಣ ಹೊಡೆಯುವುದಕ್ಕಲ್ಲ. ಅಧ್ಯಕ್ಷರು, ಮೆಂಬರ್ರುಗಳ ಮಾತು ಕೇಳದ ಪಿಡಿಒ ನಮಗೆ ಬೇಕಿಲ್ಲ. ಜವಾಬ್ದಾರಿಯುತ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಬಂದು ನಮ್ಮ ಓಣಿಗೆ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಂಚಾಯಿತಿ ಕಚೇರಿಗೆ ಬೀಗ ಹಾಕಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು, ಎಂದು ಎಚ್ಚರಿಕೆ ನೀಡಿದ್ದಾರೆ.

ಸಾವಯವ ಕೃಷಿ: 2 ಅಡಿ ಉದ್ದ, 3 ಕೆಜಿಗೂ ಅಧಿಕ ತೂಕದ ಬಾಹುಬಲಿ ಸೌತೆಕಾಯಿ ಬೆಳೆದ ರೈತ!

ಕುರುಕ್ಷೇತ್ರ (ಹರಿಯಾಣ),ಜೂ.07- ಆಧುನಿಕ ಕೃಷಿಯ ಯುಗದಲ್ಲಿ ಇಳುವರಿಯನ್ನು ಹೆಚ್ಚಿಸಲು ಹೈಬ್ರಿಡ್ ಬೀಜಗಳು ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ರೈತರು ಹೆಚ್ಚು ಅವಲಂಬಿಸಿದ್ದಾರೆ. ಇಂತಹ ಹೊತ್ತಲ್ಲಿ ಕುರುಕ್ಷೇತ್ರ ನಗರದ ರೈತನೊಬ್ಬ ಸಾಂಪ್ರದಾಯಿಕ, ಶುದ್ಧ ಸಾವಯವ ಕೃಷಿಯ ಶಕ್ತಿಯಿಂದ ಎಲ್ಲರನ್ನು ಬೆರಗುಗೊಳಿಸಿದ್ದಾರೆ.



ಅಭಿಮನ್ಯುಪುರ ಗ್ರಾಮದ ಪ್ರಗತಿಪರ ರೈತ ಅಶ್ವಿನಿ ಶರ್ಮಾ ತಮ್ಮ ಮನೆಯ ತೋಟದಲ್ಲಿ ಬೃಹತ್ ಸೌತೆಕಾಯಿಯನ್ನು ಬೆಳೆದಿದ್ದಾರೆ. ಇದು ಉದ್ದ ಮತ್ತು ತೂಕದಲ್ಲಿ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದೆ. ಆರಂಭದಲ್ಲಿ, ಈ ದೈತ್ಯ ಸೌತೆಕಾಯಿಯ ಫೋಟೋಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದಾಗ, ನೆಟಿಜನ್‌ಗಳು ಅವುಗಳನ್ನು ಫೋಟೋಶಾಪ್ ಮಾಡಲಾಗಿದೆ ಎಂದಿದ್ದರು. ಅವು ನಿಜವೆಂದು ನಂಬಲು ನಿರಾಕರಿಸಿದ್ದರು. ಆದಾಗ್ಯೂ, ಕುತೂಹಲಕಾರಿ ವೀಕ್ಷಕರು ಮತ್ತು ಕೃಷಿ ಉತ್ಸಾಹಿಗಳು ಅಶ್ವಿನಿ ಶರ್ಮಾ ಅವರ ತೋಟಕ್ಕೆ ಭೇಟಿ ನೀಡಿದಾಗ ಮತ್ತು ಸ್ವತಃ ಸೌತೆಕಾಯಿಯನ್ನು ನೋಡಿದಾಗ, ಅವರು ಆಶ್ಚರ್ಯಚಕಿತರಾದರು.

ಅತಿ ಉದ್ದ ಮತ್ತು ಭಾರವಾದ ಸೌತೆಕಾಯಿ: ಅಶ್ವಿನಿ ಶರ್ಮಾ ತಮ್ಮ ಮಣ್ಣಿನ ಅಪಾರ ಫಲವತ್ತತೆಯನ್ನು ಪ್ರದರ್ಶಿಸಿದ್ದಾರೆ. ತಮ್ಮ ಸಾವಯವ ತೋಟದಲ್ಲಿ ಬೆಳೆದ ದೇಶಿ ಸೌತೆಕಾಯಿ - 3.3 ಕೆಜಿ ತೂಕ ಮತ್ತು 2 ಅಡಿ 2 ಇಂಚು ಉದ್ದವಿದೆ.

25 ವರ್ಷಗಳ ಸಾವಯವ ಸಮರ್ಪಣೆ: ರೈತ ಅಶ್ವಿನಿ ಶರ್ಮಾ ಕಳೆದ 25 ವರ್ಷಗಳಿಂದ ತಮ್ಮ ಜಮೀನಿನ ಒಂದು ನಿರ್ದಿಷ್ಟ ಭಾಗವನ್ನು ಸಂಪೂರ್ಣವಾಗಿ ರಾಸಾಯನಿಕ ಮುಕ್ತವಾಗಿ ನಿರ್ವಹಿಸುತ್ತಿದ್ದು, ತಮ್ಮ ಕುಟುಂಬಕ್ಕಾಗಿ ಪ್ರತ್ಯೇಕವಾಗಿ ತರಕಾರಿಗಳನ್ನು ಬೆಳೆಸುತ್ತಿದ್ದಾರೆ ಎಂದು ಬಹಿರಂಗಪಡಿಸಿದರು.

ಈ ವರ್ಷದ ಫೆಬ್ರವರಿ 20 ರಂದು ಈ ಸ್ಥಳೀಯ ಸೌತೆಕಾಯಿ ನೆಟ್ಟರು. ಈ ಸೌತೆಕಾಯಿಯನ್ನು ಬೆಳೆಯಲು ಯಾವುದೇ ವಿಶೇಷ ಟಾನಿಕ್‌ಗಳು ಅಥವಾ ರಸಗೊಬ್ಬರಗಳನ್ನು ಬಳಸಲಾಗಿಲ್ಲ ಎಂದು ಶರ್ಮಾ ವಿವರಿಸಿದ್ದಾರೆ. ಬದಲಿಗೆ, ಇದು ಫಲವತ್ತಾದ, ಸಾವಯವ ಮಣ್ಣನ್ನು ವರ್ಷಗಳ ಕಾಲ ಪೋಷಿಸಿದ ಪರಿಣಾಮವಾಗಿದೆ. ಗಮನಾರ್ಹವಾಗಿ, ಸಸ್ಯವು ಅಭಿವೃದ್ಧಿ ಹೊಂದಲು ಬಹಳ ಕಡಿಮೆ ನೀರಿನ ಅಗತ್ಯವಿತ್ತು, ಕನಿಷ್ಠ ನೀರಿನ ಬಳಕೆಯಿಂದಲೂ ಉತ್ತಮ ಗುಣಮಟ್ಟದ ಬೆಳೆಗಳನ್ನು ಉತ್ಪಾದಿಸಬಹುದು ಎಂದು ಸಾಬೀತುಪಡಿಸಿತು. ಸೌತೆಕಾಯಿಯನ್ನು ಬಳಕೆಗಾಗಿ ಕೊಯ್ಲು ಮಾಡಲಾಗುವುದಿಲ್ಲ; ಬದಲಾಗಿ, ಭವಿಷ್ಯದ ನೆಡುವಿಕೆಗಾಗಿ ಬೀಜಗಳನ್ನು ಸಂಗ್ರಹಿಸಲು ಅದನ್ನು ಸಂಪೂರ್ಣವಾಗಿ ಒಣಗಲು ಬಿಡಲಾಗುತ್ತದೆ ಎಂದಿದ್ದಾರೆ.

ಈ ಹಿಂದೆ ಇದೇ ತೋಟದಲ್ಲಿ 15 ಕಿಲೋಗ್ರಾಂಗಳಷ್ಟು ತೂಕದ ಬೃಹತ್ ಟರ್ನಿಪ್ (ಬೇರು ತರಕಾರಿ) ಅನ್ನು ಬೆಳೆಸುವ ಮೂಲಕ ಕೃಷಿ ಜಗತ್ತಿನಲ್ಲಿ ಸುದ್ದಿಯಾಗಿದ್ದರು.

ಸಸಿ ನೆಟ್ಟು ಶಾಸಕ ದದ್ದಲ ಬಸವಗೌಡ ಆಪ್ತ - ಕಾಂಗ್ರೆಸ್ ಯುವ ಮುಖಂಡ ಹುಲಿನಾಯಕ ಹುಟ್ಟುಹಬ್ಬ ಆಚರಣೆ

ಸಿರವಾರ.ಜೂ.07- ಶಾಲೆಯ ಆವರಣದಲ್ಲಿ ಸಸಿಗಳನ್ನು ನೇಡುವ ಮೂಲಕ ಹೀಗೂ ಹುಟ್ಟ ಆಚರಣೆ ಮಾಡಬಹುದು ಎಂದು ರಾಯಚೂರು ಗ್ರಾಮೀಣ ಶಾಸಕರಾದ ದದ್ದಲ ಬಸವಗೌಡ ಆಪ್ತ - ಕಾಂಗ್ರೆಸ್ ಯುವ ಮುಖಂಡ ಹುಲಿನಾಯಕ ಹುಟ್ಟುಹಬ್ಬ ಆಚರಣೆ ಮಾಡಿಕೊಂಡರು. .



ನಂತರ ಮಾತನಾಡಿದ ಹುಲಿನಾಯಕ ಜೂನ್ 5 ರಂದು ಪರಿಸರ ದಿನಾಚರಣೆ ಇದೇ, ಜೂನ್ 6 ನನ್ನ ಹುಟ್ಟುಹಬ್ಬ ಇದೇ ಅದರ ಅಂಗವಾಗಿ ಕಾಲೇಜಿನ ಆವರಣದಲ್ಲಿ ಸಸಿ ನೆಡುವ ಮೂಲಕ ಆಚರಿಸಿ ಎಂದು ಕೆಲವರು ಹೇಳಿದ ಕಾರಣ ಈ ರೀತಿ ಆಚರಣೆ ಮಾಡಿದೆವೆ. ಪ್ರತಿಯೊಬ್ಬ ಪ್ರತಿ ವರ್ಷ ತಮ್ಮ ಮನೆಯಲ್ಲಿ ಹೊಲದಲ್ಲಿ ಶಾಲಾ ಕಾಲೇಜುಗಳಲ್ಲಿ ಗಿಡಮರಗಳನ್ನು ಬೆಳೆಸಿ ಸರಕ್ಷಣೆ ಮಾಡಬೇಕು ಇವುಗಳನ್ನು ಬೆಳಸುವದರಿಂದ ನಮಗೆ ಒಳ್ಳೆಯ ಗಾಳಿ. ಮಳೆ ಬೆಳೆ ವಾತಾವರಣ ಸಮೃದ್ಧಿಯಾಗಲಿಕ್ಕೆ ಸಾಧ್ಯವಾಗುತ್ತದೆ ಎಂದರು ಈ ಸಂದರ್ಭದಲ್ಲಿ ಕಾ.ನಿ.ಪ.ಸಂಘದ ತಾಲೂಕ ಅದ್ಯಕ್ಷ ಹನಮೇಶ, ಯುವ ಮುಖಂಡರಾದ ಮಲ್ಲಿಕಾರ್ಜುನ ಸಿಕಂಟಿಗೌಡ, ರವಿನಾಯಕ, ಪತ್ರಕರ್ತ ಅಪ್ಪಾಜಿ ನಾಯಕ, ಟಿ.ರಮೇಶ ನಾಯಕ, ರಾಜು ನಾಯಕ, ಬಸವರಾಜ ಟಿವಿಎಸ್, ಬೊಂಬಾಯಿ, ರಮೇಶ ಬಲ್ಲಟಗಿ, ಹಂಪಣ್ಣ, ವಿನೋದ, ಹನುಮೇಶ ಜಾಡಲದಿನ್ನಿ ಇನ್ನಿತರರು ಇದರು

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR